ಸಂಪುಟ 01 | ಸಂಚಿಕೆ 144 | ಗುರುವಾರ 30 ಜುಲೈ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1)ಅಂತರರಾಷ್ಟ್ರೀಯ ಸ್ನೇಹ ದಿನ (International Day of Friendship)
ವಿಶ್ವಸಂಸ್ಥೆಯು ಘೋಷಿಸಿರುವ ಈ ದಿನವನ್ನು ಸ್ನೇಹ, ಶಾಂತಿ ಮತ್ತು ಪರಸ್ಪರ ಸಹಕಾರವನ್ನು ಬೆಳೆಸುವ ಉದ್ದೇಶದಿಂದ ಆಚರಿಸಲಾಗುತ್ತದೆ.

2)ಮಾನವ ಕಳ್ಳಸಾಗಣೆ ವಿರುದ್ಧದ ವಿಶ್ವ ದಿನ (World Day Against Trafficking in Persons)
ಮಾನವ ಕಳ್ಳಸಾಗಣೆಯ ಬಗ್ಗೆ ಜಾಗೃತಿ ಮೂಡಿಸಲು ಹಾಗೂ ಸಂತ್ರಸ್ತರ ಹಕ್ಕುಗಳನ್ನು ರಕ್ಷಿಸಲು ಈ ದಿನವನ್ನು ವಿಶ್ವಸಂಸ್ಥೆಯು ಆಚರಿಸುತ್ತದೆ.

3)ಪೇಪರ್‌ಬ್ಯಾಕ್ ಪುಸ್ತಕ ದಿನ (Paperback Book Day)
ಕಡಿಮೆ ಬೆಲೆಯ ಪೇಪರ್‌ಬ್ಯಾಕ್ ಪುಸ್ತಕಗಳ ಮಹತ್ವವನ್ನು ನೆನಪಿಸುವ ದಿನ.

4)ರಾಷ್ಟ್ರೀಯ ಚೀಸ್‌ಕೇಕ್ ದಿನ (National Cheesecake Day) (ಮುಖ್ಯವಾಗಿ ಅಮೆರಿಕದಲ್ಲಿ ಆಚರಣೆ)
ಚೀಸ್‌ಕೇಕ್ ಸಿಹಿತಿಂಡಿಯನ್ನು ಗೌರವಿಸುವ ವಿಶೇಷ ದಿನ.

## ಸುಭಾಷಿತ

ನದಿಗಳು ತಮಗಾಗಿ ಹ-
ರಿಯುವುದಿಲ್ಲ, ಮರಗಳು ತಮಗಾಗಿ
ಹಣ್ಣು ಬಿಡುವುದಿಲ್ಲ. ಇಡೀ
ಪ್ರಕೃತಿಯೇ ಪರೋಪಕಾರಕ್ಕಾಗಿ
ಬದುಕುತ್ತಿರುವಾಗ, ಮನುಷ್ಯ
ಮಾತ್ರ ಸ್ವಾರ್ಥಿಯಾಗಬಾರದು.
ನಮ್ಮ ಬದುಕಿನಲ್ಲಿ ಸಣ್ಣದೊಂದು
ಭಾಗವಾದರೂ ಸಮಾಜದ ಸೇವೆಗೆ
ಮೀಸಲಿರಲಿ

~ಸಿದ್ದೇಶ್ವರ ಸ್ವಾಮೀಜಿ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಶನಿವಾರ ರಾಜ್ಯ ಸಚಿವ ಸಂಪುಟ ವಿಸ್ತರಣೆ ಸಾಧ್ಯತೆ..?

ನೈಜ್ಯ ದೆಸೆ ನ್ಯೂಸ್

ಬೆಂಗಳೂರು; ಸಚಿವ ಸಂಪುಟ ವಿಸ್ತರಣೆಯ ಕುರಿತ ಹಗ್ಗ-ಜಗ್ಗಾಟ ದೆಹಲಿಯಲ್ಲಿ ಮತ್ತೂ ಮುಂದುವರೆದಿದ್ದು, ಬಹುತೇಕ ಇಂದು ಸಂಜೆಯೊಳಗಾಗಿ ಚರ್ಚೆಗಳು ಅಂತಿಮಗೊಂಡು ಶುಕ್ರವಾರ ಅಥವಾ ಶನಿವಾರ ಸಂಪುಟ ವಿಸ್ತರಣೆಯಾಗುವ ಸಾಧ್ಯತೆ ಇದೆ.

ಆಗಸ್ಟ್ 13ರಿಂದ ವಿಧಾನಮಂಡಲದ ಅಧಿವೇಶನ ನಿಗಧಿಯಾಗಿದ್ದು ಅದಕ್ಕೂ ಮೊದಲು ಕನಿಷ್ಠ 10 ದಿನಗಳಲ್ಲಿ ಸಂಪುಟ ವಿಸ್ತರಣೆಯಾಗಿ ಸಚಿವರು ಇಲಾಖೆಯನ್ನು ಅಧ-'ಇ್ಯಸಿ ಕೊಳ್ಳಬೇಕಿದೆ. ಅಲ್ಲದೇ ಈ ಬಾರಿ ಸಂಪುಟ ವಿಸ್ತರಣೆಯಲ್ಲಿ ಹಿಂದೆದೂ ಇಲ್ಲದಷ್ಟು ಚರ್ಚೆಗಳು, ಪರಿಶೀಲನೆಗಳು, ಪರಿಷ್ಕರಣೆಗಳು ನಡೆಯುತ್ತಿವೆ. ಕಳೆದ ಒಂದು ತಿಂಗಳಿನಿಂದಲೂ ಇದು 7ನೇ ಸುತ್ತಿನ ಸಭೆಯಾಗಿದೆ. ಇನ್ನೂ ಎರಡು ಸುತ್ತಿನ ಚರ್ಚೆಗಳು ಬಾಕಿಯಿದ್ದು, ಬಹುತೇಕ ಇಂದು ಮುಕ್ತಾಯವಾಗಬಹುದು ಅಥವಾ ನಾಳೆಗೂ ಮುಂದೂಡಬಹುದು ಎಂದು ಹೇಳಲಾಗುತ್ತಿದೆ. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನಿಗದಿ ಪಡಿಸಿರುವ ಮಾನದಂಡಗಳನ್ನು ಆಧರಿಸಿ ಸಂಭವನೀಯರ ಪಟ್ಟಿಯನ್ನು ಅಖೈರುಗೊಳಿಸಲು ರಾಜ್ಯ ನಾಯಕರು ಕಸರತ್ತು ನಡೆಸುತ್ತಿದ್ದಾರೆ. ಸರಿಸುಮಾರು 15ಕ್ಕಿಂತಲೂ ಹೆಚ್ಚು ಮಂದಿ ಹೊಸ



ಮುಖಗಳಿಗೆ ಅವಕಾಶ ನೀಡಬೇಕೆಂಬುದು ಭಾರೀ ತಲೆನೋವಿನ ಸಂಗತಿಯಾಗಿದೆ.

ಹಿರಿಯರನ್ನು ಒಂದು ಕಡೆ ನಿಲ್ಲಿಸಿ ಹೊಸಬರಿಗೆ ಮಣೆ ಹಾಕಿದಾಗ, ಬಂಡಾಯ ಚಟುವಟಿಕೆಗಳು ಹೆಚ್ಚಾಗಬಹುದು ಎಂಬ ಆತಂಕವಿದೆ. ಹೊಸಬರ ಆಯ್ಕೆ ವಿಷಯದಲ್ಲಿ ಭೌಗೋಳಿಕ ಮತ್ತು ಸಾಮಾಜಿಕ ಆದ್ಯತೆಗಳ ಲೆಕ್ಕಾಚಾರವಷ್ಟೇ ಅಲ್ಲದೇ ಪಕ್ಷ ಸಂಘಟನೆ ಮತ್ತು ಜನಪ್ರಿಯತೆಯನ್ನು ಪರಿಗಣಿಸಲಾಗುತ್ತಿದೆ.

ಚುನಾವಣಾ ರಣನೀತಿ ಸಲಹೆಗಾರರೊಬ್ಬರು ನೀಡಿರುವ ವರದಿಯ ಪ್ರಕಾರ ಕ್ರಿಯಾಶೀಲ ಯುವಕರಿಗೂ ಆದ-'್ಯತೆ ನೀಡಬೇಕಿದೆ. ಆದರೆ ಈ ಸಂದರ್ಭದಲ್ಲಿ ಸಾಮಾಜಿಕ ನ್ಯಾಯಕ್ಕೆ ಧಕ್ಕೆಯಾಗದಂತೆ ಎಚ್ಚರಿಕೆ ವಹಿಸುವುದು ಸವಾಲಿನ ಕೆಲಸ ಎನ್ನಲಾಗುತ್ತಿದೆ. ಲಿಂಗಾಯುತ ಸಮುದಾಯದಲ್ಲಿ ಹಲವಾರು ಮಂದಿ ಕ್ರಿಯಾಶೀಲ ಯುವ ಶಾಸಕರಿದ್ದಾರೆ. ಆದರೆ ಪಕ್ಷದ ಮೇಲೆ ಭಾರೀ ಪ್ರಭಾವ ಬೀರುವ ಹಿರಿಯರ ಸಂಖ್ಯೆಯೂ ಹೆಚ್ಚಿದೆ. ಹಿಂದುಳಿದ ವರ್ಗಗಳಲ್ಲಿ ಪ್ರಮುಖ ಜನಸಂಖ್ಯೆ ಹೊಂದಿರುವ ಜಾತಿಗಳ ಮುಖಂಡ-ರಿಗೆ ಮಣೆ ಹಾಕಬೇಕು. ಏಕಕಾಲದಲ್ಲಿ ಅವಕಾಶ ವಂಚಿತ ಸಮುದಾಯದವರನ್ನು ಪರಿಗಣಿಸಬೇಕೆಂಬ ಪ್ರಯತ್ನಗಳು ನಡೆಯುತ್ತಿವೆ.

ಸಂಪುಟ ವಿಸ್ತರಣೆಗೆ ವಿಳಂಬವಾದಷ್ಟು ಆಕಾಂಕ್ಷಿಗಳ ಸಂಖ್ಯೆ ಹೆಚ್ಚುತ್ತಿದೆ. ದೆಹಲಿಯಲ್ಲಿ 65 ರಿಂದ 70 ಸಂಖ್ಯೆಯಷ್ಟು ಶಾಸಕರು, 10ಕ್ಕೂ ಹೆಚ್ಚು ಮಂದಿ ವಿಧಾನಪರಿಷತ್ ಸದಸ್ಯರು ಠಿಕಾಣಿ ಹೂಡಿದ್ದಾರೆ. ಮೊದಲ ಬಾರಿ ಆಯ್ಕೆಯಾದ ಶಾಸಕರೂ ಕೂಡ ತಮ ಕೌಟುಂಬಿಕ ಹಿನ್ನೆಲೆ, ಸಾಮಾಜಿಕ ಸ್ಥಿತಿಗತಿ ಮತ್ತು ಸಮುದಾಯ ಆಧಾರಿತವಾಗಿ ಸಚಿವ ಸ್ಥಾನ ನೀಡಬೇಕೆಂದು ಒತ್ತಡ ಹೇರುತ್ತಿದ್ದಾರೆ.

ಸಿದ್ದರಾಮಯ್ಯ ಡಿ.ಕೆ.ಶಿವಕುಮಾರ್, ಬಿ.ಕೆ.ಹರಿಪ್ರಸಾದ್ ಅವರು ಕುಂತಲ್ಲಿ-ನಿಂತಲ್ಲಿ ಶಾಸಕರ ದಂಡೇ ಮುತ್ತಿಕೊಳ್ಳುತ್ತಿದೆ. ಎಐಸಿಸಿ ನಾಯಕರಾದ ರಾಹುಲ್‌ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ರಣದೀಪ್ ಸಿಂಗ್ ಸುರ್ಜೇವಾಲ, ಕೆ.ಸಿ.ವೇಣುಗೋಪಾಲ್ ಅವರು ಸಂಸತ್‌ನ ಕಲಾಪಗಳಲ್ಲಿ ಭಾಗವಹಿಸಿದ್ದ-ರಿಂದ ಶಾಸಕರಿಗೆ ಸಮಯ ನೀಡುತ್ತಿಲ್ಲ. ಈವರೆಗೂ ಮೂರು ಬಾರಿ ದೆಹಲಿ ಪ್ರವಾಸಕ್ಕೆಗೊಂಡಿರುವ ರಾಜ್ಯ ನಾಯಕರು ಒಮೆ ಮಾತ್ರ ರಾಹುಲ್‌ಗಾಂಧಿ ಅವರ ಜೊತೆ ಚರ್ಚೆ ನಡೆಸಿದ್ದಾರೆ. ಉಳಿದಂತೆ ಕೆ.ಸಿ.ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ ಅವರ ಜೊತೆಯಲ್ಲೇ ಸಮಾಲೋಚನೆಗಳಾಗಿವೆ. ಇಂದು ಲೋಕಸಭೆಯ ವಿರೋಧ ಪಕ್ಷದ ರಾಹುಲ್‌ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಜೊತೆ ಸಂಜೆ ಸಭೆ ನಡೆಯುವ ಸಾಧ್ಯತೆ ಇದೆ.

# ಕರವೇ ಸ್ವಾಭಿಮಾನಿ ಸೇನೆ ಮನವಿಗೆ ಸ್ಪಂದಿಸಿದ ಅಧಿಕಾರಿಗಳು

ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಪಟ್ಟಣದಲ್ಲಿ ಹೆಚ್ಚುತ್ತಿರುವ ರಸ್ತೆ ಅಪಘಾತಗಳನ್ನು ತಡೆಗಟ್ಟುವ ಹಾಗೂ ಸಾರ್ವಜನಿಕರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಪ್ರಮುಖ ವೃತ್ತ ಮತ್ತು ಜನದಟ್ಟಣೆ ಪ್ರದೇಶಗಳಲ್ಲಿ ರಬ್ಬರ್ ಹಂಪ್ಸ್ ಅಳವಡಿಸುವಂತೆ ಕರವೇ ಸ್ವಾಭಿಮಾನಿ ಸೇನೆ ತಾಲೂಕು ಅಧ್ಯಕ್ಷ ಜಿಲಾನಿ ಪಾಶ ಸಲ್ಲಿಸಿದ್ದ ಮನವಿಗೆ ಪುರಸಭೆಯ ಅಧಿಕಾ-ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

ಇಂದು ಪಟ್ಟಣದ ಕೆಲವು ಸ್ಥಳಗಳಿಗೆ ರಾಜ್ಯ ಹೆದ್ದಾರಿ ಹುನುಗುಂದ ವಿಭಾಗದ ಅಧಿಕಾ-ರಿಗಳು ಸ್ಥಳ ಪರಿಶೀಲನೆ ನಡೆಸಿ, ಅಗತ್ಯವಿರುವ ಸ್ಥಳಗಳಾದ ಬಸ್‌ಸ್ಟ್ಯಾಂಡ್ ಸರ್ಕಲ್, ಬಸವಸಾಗರ ವೃತ್ತ, ಸಮ್ ಕಾಲೇಜು ಹತ್ತಿರ



, ಅಮರೇಗೌಡ ಆಸ್ಪತ್ರೆ ಮುಂಭಾಗ ಸೇರಿದಂತೆ ಜನದಟ್ಟಣೆ ಇರುವ ಪ್ರಮುಖ ವೃತ್ತಗಳಲ್ಲಿ ರಬ್ಬರ್ ಹಂಪ್ಸ್ ಅಳವಡಿಸಲಾಗುವುದು ಎಂದು ಅಧಿಕಾರಿಗಳು ಭರವಸೆ ನೀಡಿದರು .

ನಂತರ ಮಾತನಾಡಿದ ಕರವೇ ಸ್ವಾಭಿಮಾನಿ ಸೇನೆ ತಾಲೂಕು ಅಧ್ಯಕ್ಷ ಜಿಲಾನಿ ಪಾಶ ಪಟ್ಟಣದಲ್ಲಿ ವಾಹನಗಳ ಅತಿವೇಗದಿಂದ ಅಪಘಾತಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರ ಸುರಕ್ಷತೆಗಾಗಿ ಈ ಕ್ರಮ ಅತ್ಯಂತ ಅಗತ್ಯವಾಗಿದೆ. ಅಧಿಕಾರಿಗಳು ಮನವಿಗೆ ಸ್ಪಂದಿಸಿ ಶೀಘ್ರ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿರುವುದು ಸ್ವಾಗತಾರ್ಹ ರಬ್ಬರ್ ಹಂಪ್ಸ್ ಅಳವಡಿಕೆಯಿಂದ ಶಾಲಾ-ಕಾಲೇಜು ವಿದ್ಯಾರ್ಥಿಗಳು, ಆಸ್ಪತ್ರೆಗಳಿಗೆ ಆಗಮಿಸುವ ರೋಗಿಗಳು, ಹಿರಿಯ ನಾಗ-ರಿಕರು ಹಾಗೂ ಸಾರ್ವಜನಿಕರು ಸುರಕ್ಷಿತವಾಗಿ ರಸ್ತೆ ದಾಟಲು ಅನುಕೂಲವಾಗಲಿದೆ ಎಂದು ಹೇಳಿದರು . ಈ ಸಂದರ್ಭದಲ್ಲಿ ಪುರಸಭೆ ಮುಖ್ಯಾಧಿಕಾರಿ ನಟರಾಜ್ , ಸಿ ಪಿ ಐ ಹೊಸಕೇರಪ್ಪ , ರಾಜ್ಯ ಹೆದ್ದಾರಿ ಹುನುಗುಂದ ವಿಭಾಗದ ಅಧಿಕಾರಿಗಳು ಪುರಸಭೆ ಅಧಿಕಾ-ರಿಗಳು , ಕರವೇ ಸ್ವಾಭಿಮಾನಿ ಸೇನೆಯ ಕಾರ್ಯಕರ್ತರು ಸಾರ್ವಜನಿಕರು ಇದ್ದರು .

## ಶ್ರೀ ಬಸವೇಶ್ವರ ಸಂಯುಕ್ತ ಪ್ರೌಢಶಾಲೆಯಲ್ಲಿ ನಿಜಶರಣ ಹಡಪದ ಅಪ್ಪಣ್ಣನವರ ಜಯಂತಿ ಆಚರಣೆ

ನೈಜ್ಯ ದೆಸೆ ನ್ಯೂಸ್

ಬಳಗಾನೂರು: ಪಟ್ಟಣದ ಶ್ರೀ ಬಸವೇಶ್ವರ ಸಂಯುಕ್ತ ಪ್ರೌಢಶಾಲೆಯಲ್ಲಿ ಇಂದು ನಿಜಶರಣ ಹಡಪದ ಅಪ್ಪಣ್ಣನವರ ಜಯಂತಿಯನ್ನು ಅತ್ಯಂತ ಸಡಗರ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕನ್ನಡ ಭಾಷಾ ಶಿಕ್ಷಕಿ ಶ್ರೀಮತಿ ಬೋರಮ್ಮ ಅವರ ಅಚ್ಚುಕಟ್ಟಾದ ನಿರೂಪಣೆಯೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು. ಈ ವಿಶೇಷ ಕಾರ್ಯಕ್ರಮದಲ್ಲಿ ಸಮಾಜ ವಿಜ್ಞಾನ ವಿಷಯದ ಶಿಕ್ಷಕರಾದ ಶ್ರೀ ವೆಂಕಟೇಶ್ ಅವರು ಉಪನ್ಯಾಸ ನೀಡಿ, ನಿಜಶರಣ ಹಡಪದ ಅಪ್ಪಣ್ಣನವರ ಜೀವನ ಚರಿತ್ರೆ ಹಾಗೂ ಅವರ ಕಾಲಮಾನದ ಸಮಾಜದ ಸ್ಥಿತಿಗತಿಗಳ ಕುರಿತು ವಿದ್ಯಾರ್ಥಿಗಳಿಗೆ ಸವಿಸ್ತಾರವಾದ ಮಾಹಿತಿಯನ್ನು ನೀಡಿ ಮಾರ್ಗದರ್ಶನ ಮಾಡಿದರು.





ಕಾರ್ಯಕ್ರಮದ ಮುಖ್ಯ ಅತಿಥಿ-ಯಾಗಿ ಮಾತನಾಡಿದ ಶಾಲೆಯ ಮುಖ್ಯ ಗುರುಗಳು, "ನಿಜಶರಣ ಹಡಪದ ಅಪ್ಪಣ್ಣನವರ ನಿಷ್ಠೆಯ ಕಾಯಕ ಜೀವನವು ಇಂದಿನ ಯುವ ಪೀಳಿಗೆಗೆ ಮತ್ತು ಎಲ್ಲರಿಗೂ ಸದಾ ಮಾದ-ರಿಯಾಗಿದೆ" ಎಂದು ತಿಳಿಸಿ, ಮಕ್ಕಳು ಅವರ ತತ್ವ-ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಮುಖ್ಯೋಪಾಧ್ಯಾಯರಾದ ಅಮರನಾಥ್ ಹಳ್ಳೂರ, ಶಿಕ್ಷಕರಾದ ಸೋಮಶೇಖರ್ , ವೆಂಕಟೇಶ್ ,ಮಲ್ಲಿಕಾರ್ಜುನ ,ಬಸವರಾಜ ಹಾಗೂ ಶಿಕ್ಷಕಿಯಾದ ಬೋರಮ್ಮ ಮತ್ತು ಸಮಸ್ತ ವಿದ್ಯಾರ್ಥಿ ವಿದ್ಯಾರ್ಥಿನಿಯರು ಸಕ್ರಿಯವಾಗಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ಉದ್ಯೋಗಕ್ಕಾಗಿ ಬೇರೆಯವರನ್ನು ಆಶ್ರಯಿಸುವ ಬದಲು, ತಾವೇ ಬಿಸಿನೆಸ್ ಮಾಲೀಕರಾಗಿ : ರಾಘವೇಂದ್ರ ಕೆ.

ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ಗ್ರಾಮೀಣ ಮತ್ತು ನಗರ ಪ್ರದೇಶಗಳ ನಿರುದ್ಯೋಗಿ ಯುವಕ-ಯುವತಿಯರು ಹಾಗೂ ಮಹಿಳೆಯರಲ್ಲಿ ಉದ್ಯಮಶೀಲತೆಯ ಅರಿವು ಮೂಡಿಸಿ, ಅವರು ಸ್ವಂತ ಉದ್ಯೋಗವನ್ನು ಪ್ರಾರಂಭಿಸಲು ಅಗತ್ಯವಿರುವ ಮಾರ್ಗದರ್ಶನ ಮತ್ತು ಧೈರ್ಯವನ್ನು ನೀಡುವ ತರಬೇತಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ನ ಕಾರ್ಯಕ್ರಮವಾಗಿದೆ.

ಆರ್ಥಿಕ ಸಂಕಷ್ಟಕ್ಕೆ ದುಡಿಮೆಯೇ ಮದ್ದು ಎನ್ನುವುದನ್ನು ಮಹಿಳೆಯರು ಅರಿತುಕೊಳ್ಳಬೇಕು ಎಂದು ಇಲ್ಲಿನ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಯೋಜನಾಧಿಕಾರಿ ರಾಘವೇಂದ್ರ ಹೇಳಿದರು. ಅವರು ಎಮ್ಮಿಗನೂರು



ಸಾವಿತ್ರಿಬಾಯಿಫುಲೆ ಜ್ಞಾನ ವಿಕಾಸ ಕೇಂದ್ರದ ಸ್ವ- ಉದ್ಯೋಗ ಪ್ರೇರಣಾ ಶಿಬಿರದ ಸಮಾರೋಪ ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿ, ಹೊಲಿಗೆ ಯಂತ್ರ ಬಳಸಿಕೊಂಡು ಕೌಶಲದಿಂದ ನಾನಾ ವಸ್ತಗಳನ್ನು ತಯಾರಿಸಿ ಆರ್ಥಿಕ ಸ್ವಾವಲಂಬನೆ ಸಾಧಿಸಲು ಮುಂದಾಗಬೇಕು ಎಂದರು.

ಗ್ರಾಮದ 50 ಜನ ಮಹಿಳೆಯ-ರಿಗೆ ಬಟ್ಟೆ ಚೀಲ, ಬಟ್ಟೆ ಹೂ ತಯಾರಿಸುವ ಕೌಶಲವನ್ನು ತರಬೇತುದಾರರಾದ ಅರಳಿ ಸುಧಾ, ರಾಮುಲಮ್ಮ ಕಲಿಸಿಕೊಟ್ಟರು. ಗ್ರಾಮದ ಪ್ರಮುಖ ಶಾಶ್ವತ ರೆಡ್ಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕೇಂದ್ರದ ಅಧ್ಯಕ್ಷೆ ಬನಶಂಕರಿ, ಸಮನ್ವಯ ಅಧಿಕಾರಿ ಆರ್.ಎನ್.ಮಂಜುಳಾ, ಮೇಲ್ವಿಚಾರಕ ಈಶ್ವರ್, ಪ್ರಮುಖರಾದ ರಾಘವೇಂದ್ರ, ರಾಮಪ್ಪ ಇತರರಿದ್ದರು.

# ಬೂತ್ ಮಟ್ಟದ ಕಾರ್ಯಕರ್ತರ ಅಭಿಪ್ರಾಯ ಸಂಗ್ರಹ : ಆಕಾಂಕ್ಷಿಗಳಿಂದ ಅರ್ಜಿ ಸಲ್ಲಿಕೆ

ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಕಾಂಗ್ರೆಸ್ ಪಕ್ಷವನ್ನು ತಳಮಟ್ಟದಿಂದ ಬಲಪಡಿಸುವ ಉದ್ದೇಶದಿಂದ ಪಕ್ಷ ಹಮ್ಮಿಕೊಂಡಿರುವ ಸಂಘಟನಾ ಸೃಜನ ಅಭಿಯಾನದ ಅಂಗವಾಗಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆಗೆ ಬುಧವಾರ ಲಿಂಗಸಗೂರಿನಲ್ಲಿ ಚಾಲನೆ ನೀಡಲಾಯಿತು.

ಪಟ್ಟಣದ ಐಎಂಎಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಐಸಿಸಿ ವೀಕ್ಷಕರಾಗಿರುವ ತೆಲಂಗಾಣ ರಾಜ್ಯದ ಶಾಸಕ ತೊಟ್ಟ ಲಕ್ಷ್ಮಿಕಾಂತ ರಾವ್, ಕೆಪಿಸಿಸಿ ಉಪಾಧ್ಯಕ್ಷರು ಹಾಗೂ ಮಾಜಿ ಶಾಸಕ ಮಕ್ಬುಲ್ ಭಗವಾನ್, ಕೆಪಿಸಿಸಿ ಉಪಾಧ್ಯಕ್ಷ ಜಾನ್ ವೆಸ್ಲಿ ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಪಾಟೀಲ್ ಇಟಗಿ ಅವರ ಸಮ್ಮುಖದಲ್ಲಿ ಅಭಿಪ್ರಾಯ



ಸಂಗ್ರಹ ಆರಂಭಿಸಲಾಯಿತು. ಎಐಸಿಸಿ ನಾಯಕ ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಮಾರ್ಗದರ್ಶನದಂತೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಬೂತ್ ಮಟ್ಟದ ಕಾರ್ಯಕರ್ತರ ಅಭಿಪ್ರಾಯ ಸಂಗ್ರಹಿಸಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಆಸಕ್ತರಿಗೆ ಅರ್ಜಿ ವಿತರಿಸಲಾಯಿತು.

ಲಿಂಗಸಗೂರು ಕ್ಷೇತ್ರದಿಂದ ಶರಣಗೌಡ ಪಾಟೀಲ್ ಬಯ್ಯಾಪುರ ಹಾಗೂ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿಯ ಸದಸ್ಯ ಪಾಮಯ್ಯ ಮುರಾರಿ ಅವರು ವೀಕ್ಷಕರಿಗೆ ತಮ್ಮ ಅರ್ಜಿಗಳನ್ನು ಸಲ್ಲಿಸಿದರು. ಇದೇ ವೇಳೆ ಬಸನಗೌಡ ದದ್ದಲ್, ಅಬ್ದುಲ್ ಕರೀಂ, ಎಂ.ಈರಣ್ಣ(ಮಾನ್ವಿ), ರಾಜಶೇಖರ್ (ಸಿಂಧನೂರು), ಲಿಂಗರಾಜ ಹಂಚಿನಾಳ, ಅಸ್ಲಾಂ ಪಾಶ ಹಾಗೂ ನವನೀತ್ ಆದೋನಿ ಅವರ ಹೆಸರನ್ನೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಪರಿಗಣಿಸುವಂತೆ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಭೂಪನಗೌಡ ಕರಡಕಲ್ ಹಾಗೂ ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಬಸವರಾಜಗೌಡ ಗಣೇಕಲ್ ಅವರು ವೀಕ್ಷಕರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಗುಂಡಪ್ಪ ನಾಯಕ್, ಶಶಿಧರ್ ಪಾಟೀಲ್, ಬಸವರಾಜ ಬಸಾಪುರ, ಅನೀಸ್ ಪಾಶ, ಇಬ್ರಾಹಿಂ ಗ್ಯಾರಂಟಿ, ಶರಣಬಸವ ವಾರದ, ಪ್ರಕಾಶ ಕುರಿ, ಜಗದೀಶಗೌಡ, ಮಾಂತೇಶ್ ಪಾಟೀಲ್ ಮುದುಗಲ್, ಶ್ರೀ ಕಾಂತ್ ಗೌಡ ಮುದುಗಲ್, ರಾಘವೇಂದ್ರ ದೇಶಪಾಂಡೆ, ಅನಿಲ್ ಕುಮಾರ್ ಮುದುಗಲ್, ಜೋಸೆಫ್, ಕೇಶವ ರೆಡ್ಡಿ, ಬಿ.ಎಂ. ಪಾಟೀಲ್ ಚಿತ್ತಾಪುರ, ಸಂಗನಗೌಡ ನಾಡಗೌಡ, ಮೋಹನ್ ಗೋಸ್ಲೆ ಸೇರಿದಂತೆ ಪಕ್ಷದ ಕಾರ್ಯಕರ್ತರು ಇದ್ದರು.

## ಸಾಹಿತ್ಯ ಸಿಂಚನ

### ಕನಸು ನನಸಾದಾಗ

ಕತ್ತಲೆಯಲಿ ಮೂಡಿದ ಕನಸು,
ಬೆಳಕಾಗಿ ಬಾಳಲಿ ಅರಳಿದ ಕ್ಷಣವು.
ಬೆವರಿನ ಹನಿಯ ಪ್ರತಿಫಲವಾಗಿ,
ಗೆಲುವಿನ ಹೂವು ಅರಳಿತು ನಗೆಯಾಗಿ.

ಸೋಲಿನ ದಾರಿಯ ಮುಳ್ಳುಗಳ ನಡುವೆ,
ಭರವಸೆಯ ಹೆಜ್ಜೆ ನಿಂತಿರಲಿಲ್ಲ ಎಂದೆಂದಿಗೂ.
ಧೈರ್ಯದ ದೀಪವು ದಾರಿತೋರಿದಾಗ,
ಕನಸು ಕೊನೆಗೆ ನನಸಾಗಿ ಹೊಮ್ಮಿತು.

ಪ್ರತಿ ಪ್ರಯತ್ನವೂ ಫಲ ಕೊಟ್ಟಿತು,
ಪ್ರತಿ ನೋವೂ ಪಾಠವಾಯಿತು.
ಕಷ್ಟದ ಬೆಟ್ಟವನ್ನು ಏರಿದ ಮನಕೆ,
ಯಶಸ್ಸಿನ ಶಿಖರವೇ ಬಹುಮಾನವಾಯಿತು.

ಕನಸು ನನಸಾದ ಕ್ಷಣದ ಸಂತಸ,
ಮಾತಿನಲ್ಲಿ ಹೇಳಲಾರದ ಹಬ್ಬ.
ಹೊಸ ಗುರಿಗಳತ್ತ ಮತ್ತೆ ಹೆಜ್ಜೆಯಿಟ್ಟು,
ಜೀವನವನ್ನೇ ಬೆಳಗಿಸೋಣ ನಂಬಿಕೆಯಿಟ್ಟು.

ಕನಸು ಕಾಣುವುದೇ ಆರಂಭವಾದರೆ,
ಅದನ್ನು ನನಸಾಗಿಸುವುದು ಪರಿಶ್ರಮವೇ.
ನಂಬಿಕೆ, ಶ್ರಮ, ತಾಳ್ಮೆ ಜೊತೆಯಾದಾಗ,
ಪ್ರತಿ ಕನಸೂ ಖಂಡಿತ ನನಸಾಗುತ್ತದೆ.

## ಜಾನುವಾರುಗಳ ಅಕ್ರಮ ಸಾಗಣೆ ಮತ್ತು ಪ್ರಾಣಿ ಹಿಂಸೆ ತಡೆ ಕಾಯ್ದೆಯಡಿ ಪ್ರಕರಣ ದಾಖಲು

❑ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ಪಟ್ಟಣದ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣದ ಪ್ರಮುಖಾಂಶಗಳು ದಿನಾಂಕ 28.07.2026ರ ಬೆಳಿಗ್ಗೆ ಸುಮಾರು 11:00 ಗಂಟೆಗೆ ತಾಲೂಕಿನ ಮೆಟ್ರಿ ಗ್ರಾಮದ ಪ್ರಮುಖ ವ್ಯಕ್ತಿಗಳು ಪಿರ್ಯಾಧಿದಾರರು (ದೂರುದಾರರು) ಮತ್ತು ಅವರ ಸ್ನೇಹಿತ ಗಂಗಾ ನೀಡಿದ ದೂರಿನ ಪ್ರಕಾರ ಸಿಂಧನೂರಿನಿಂದ ಅನಂತಪುರದ ಕಡೆಗೆ ವಿವಿಧ ಕಂಪನಿಗಳ ಗೂಡ್ಸ್ ವಾಹನಗಳಲ್ಲಿ ಜಾನುವಾರುಗಳನ್ನು ತುಂಬಿಕೊಂಡು ಹೋಗುತ್ತಿರುವುದು ಕಂಡುಬಂದಿದೆ.




ದೂರುದಾರರು ತಕ್ಷಣ 112 ತುರ್ತು ಸಂಖ್ಯೆಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ಪ್ರಮುಖ ಆರೋಪಗಳು : ವಾಹನದ ಚಾಲಕರು ದೂರುದಾರರಿಗೆ ಹಣದ ಆಮಿಷ ಒಡ್ಡಿದ್ದಾರೆ.ಗೂಡ್ಸ್ ವಾಹನದ ಇಕ್ಕಟ್ಟಾದ ಸ್ಥಳದಲ್ಲಿ ನಾಲ್ಕು ಜಾನುವಾರುಗಳನ್ನು ಹಿಂಸಾತ್ಮಕವಾಗಿ ತುಂಬಲಾಗಿ-ತ್ತು. ಜಾನುವಾರುಗಳನ್ನು ಕಸಾಯಿಕಾನೆಗೆ ತೆಗೆದುಕೊಂಡು ಹೋಗಲಾಗುತ್ತಿದೆ ಎಂಬ ಬಲವಾದ ಶಂಕೆ ವ್ಯಕ್ತವಾಗಿದೆ. ಠಾಣೆ ಮತ್ತು ಗುನ್ನೆ ನಂಬರ್ ಕಂಪ್ಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ಸಂಖ್ಯೆ: 113/2026 ರಡಿಯಲ್ಲಿ ಕೇಸ್ ದಾಖಲಾಗಿದೆ. ಇದು ಜಾನುವಾರುಗಳ ಅಕ್ರಮ ಸಾಗಣೆ ಮತ್ತು ಪ್ರಾಣಿ ಹಿಂಸೆ ತಡೆ ಕಾಯ್ದೆಯಡಿ ದಾಖಲಾದ ಪ್ರಕರಣವಾಗಿದೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಪೌಷ್ಟಿಕ ಆಹಾರ ದಿನಾಚರಣೆ ಆಚರಣೆ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ತಾಲೂಕಿನ ಸಮೀಪದ ಏಳು ರಾಗಿ ಕ್ಯಾಂಪ್ ನಲ್ಲಿ ಜಿಲ್ಲಾಡಳಿತ ಜಿಲ್ಲಾ ಪಂಚಾಯತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಿಂಧನೂರು ಇವರು ಸಂಯುಕ್ತ ಆಶ್ರಯದಲ್ಲಿ ಏಳು ರಾಗಿ ಕ್ಯಾಂಪನ ಅಂಗನವಾಡಿ ಕೇಂದ್ರದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು

ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಡಾಕ್ಟರ ಅಪ್ರೋಜ್ ಭಾನು ದಂತ ವೈದ್ಯರ ಉದ್ಘಾಟನೆ ಮಾಡಿದರು. ನಂತರ ಮಾತನಾಡಿದ ಅವರು ಆರೋಗ್ಯಕರ ಜೀವನಶೈಲಿ, ವೈಯಕ್ತಿಕ ಸ್ವಚ್ಛತೆ, ಪರಿಸರ ನೈರ್ಮಲ್ಯ ಹಾಗೂ ಸಮತೋಲಿತ ಪೌಷ್ಟಿಕ ಆಹಾರದ ಮಹತ್ವದ ಕುರಿತು ಮಾಹಿತಿ



ನೀಡಿದರು. ಗರ್ಭಿಣಿಯರು, ಬಾಣಂತಿಯರು ಹಾಗೂ ಮಕ್ಕಳ ಆರೋಗ್ಯದ ಬಗ್ಗೆ ಹಾಗೂ ಮಕ್ಕಳ ಇರಲಿ ವಯಸ್ಸಿನ ನಾಗರಿಕರು ಇರಲಿ ದಂತ ಆರೋಗ್ಯ ಕಾಪಾಡಿಕೊಳ್ಳಿ. ಗುಟುಕಾ . ತಂಬಾಕು ಜಿಗಿಯುವುದು ನಿಲ್ಲಿಸಬೇಕು ಎಂದು ಅದರ ಬಗ್ಗೆ ಅರಿವು ಮೂಡಿಸಿದರು.

ನಂತರ ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು ಪೌಷ್ಟಿಕ ಆಹಾರ ಸೇವನೆಯ ಅಗತ್ಯತೆ, ಅಪೌಷ್ಟಿಕತೆಯನ್ನು ತಡೆಗಟ್ಟುವ ಕ್ರಮಗಳು ಹಾಗೂ ಸಾಂಕ್ರಾಮಿಕ ರೋಗಗಳ ನಿಯಂತ್ರಣದ ಕುರಿತು ವಿವರಿಸಿದರು. ಗ್ರಾಮಸ್ಥರು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ಹಾಗೂ ಆರೋಗ್ಯ ಇಲಾಖೆಯ ಸೇವೆಗಳನ್ನು ಸದುಪಯೋಗಪಡಿಸಿಕೊಳ್ಳಿ. ಗರ್ಭಿಣಿ ಮತ್ತು ಬಾಣಂತಿಯ ಅವಧಿಯಲ್ಲಿ ಉತ್ತಮ ಪೌಷ್ಟಿಕ ಆಹಾರವನ್ನು ಸೇವಿಸಬೇಕು ಬಾಣಂತಿ ಅವಧಿಯಲ್ಲಿ ಉತ್ತಮ ಪೌಷ್ಟಿಕ ಆಹಾರ ಸೇವನೆ ಮಾಡುವುದರಿಂದ ತಾಯಿ ಹಾಲು ವೃದ್ಧಿಯಾಗುತ್ತದೆ ಮಗುವಿಗೆ ಆರು ತಿಂಗಳ ವರೆಗೆ ಎದೆ ಹಾಲು ಮತ್ತು ನಂತರದಲ್ಲಿ ಲಘುವಾದ ಉತ್ತಮ ಪೌಷ್ಟಿಕ ಆಹಾರ ಸೇವನೆ ಅಗತ್ಯವಿದೆ ಎಂದರು.

ಈ ಸಂದರ್ಭದಲ್ಲಿ ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿಗಳು. ಲಕ್ಷ್ಮೀದೇವಿ. ಸಮುದಾಯ ಆರೋಗ್ಯ ಅಧಿಕಾರಿಗಳು. ಅನುಸೂಯ. ಅಂಗನವಾಡಿ ಕಾರ್ಯಕರ್ತೆಯರಾದ ನಿರ್ಮಲಾ.ಶಾಂತಮ್ಮ. ರಜೀಯಾ ಬೇಗಂ. ಆಶಾ ಕಾರ್ಯಕರ್ತೆ ಕಸ್ತೂರಿ ಬಾಯಿ. ತಾಯಿಂದಿರು ಮತ್ತು ಹಿರಿಯ ನಾಗರಿಕರ ಹಾಜರಿದ್ದರು.

# ನೂತನ ಗ್ರಾಮ ಘಟಕ ರಚನೆ ಶರಣಬಸವ ತಂದೆ ನಾಗಪ್ಪ ಹಡಪದ ಜಾಲಹಳ್ಳಿ ಅಧ್ಯಕ್ಷರಾಗಿ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್

**ದಿನಾಂಕ: 28 ಜುಲೈ 2026**
**ಸ್ಥಳ: ಜಾಲಹಳ್ಳಿ, ದೇವದುರ್ಗ ತಾಲೂಕು, ರಾಯಚೂರು ಜಿಲ್ಲೆ**

**ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದ ಶ್ರೀ ನಿಜಸುಖಿ ಶಿವಶರಣ ಹಡಪದ ಅಪ್ಪಣ್ಣ ಸಮುದಾಯ ಭವನದಲ್ಲಿ ಹಡಪದ ಅಪ್ಪಣ್ಣ ಸಮಾಜದ ಜಾಲಹಳ್ಳಿ ಗ್ರಾಮ ಘಟಕವನ್ನು ಒಮ್ಮತದಿಂದ ರಚಿಸಲಾಯಿತು.**

ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯು ದೇವದುರ್ಗ ತಾಲೂಕು ಹಡಪದ ಅಪ್ಪಣ್ಣ ಸಮಾಜದ ಅಧ್ಯಕ್ಷ ಪ್ರಭು ಹಡಪದ್, ಉಪಾಧ್ಯಕ್ಷ ಕೈಲಾಸ ಅರಿಕೇರಿ, ಸಂಘಟನಾ ಕಾರ್ಯದರ್ಶಿ ನಿಂಗಯ್ಯ ಮಸರಕಲ್, ಕಾರ್ಯದರ್ಶಿ ಬೂದೆಪ್ಪ, ಹಾಗೂ ಸಮಾಜದ ಪ್ರಮುಖ ಮುಖಂಡರಾದ ಚಂದ್ರಶೇಖರ್



ದೇವದುರ್ಗ, ಸಿದ್ದಲಿಂಗಪ್ಪ ಮತ್ತು ಉಮೇಶ್ ರಾಮದುರ್ಗ ಅವರ ಸಮ್ಮುಖದಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರು, ಸಮಾಜದ ಮುಖಂಡರು ಹಾಗೂ ಯುವಕರು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿ ನೂತನ ಗ್ರಾಮ ಘಟಕದ ರಚನೆಗೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ನೈಜ ದೆಸೆ ಕನ್ನಡ ದಿನಪತ್ರಿಕೆ ವರದಿಗಾರರೊಂದಿಗೆ ಮಾತನಾಡಿದ ಸಮಾಜದ ಮುಖಂಡ ಮಲ್ಲಿಕಾರ್ಜುನ ಹಡಪದ, "ಸಮಾಜದ ಸಂಘಟನೆ, ಯುವಜನರ ಭಾಗವಹಿಸುವಿಕೆ ಹಾಗೂ ಸಮುದಾಯದ ಸಮಗ್ರ ಅಭಿವೃದ್ಧಿಗೆ ನೂತನ ಗ್ರಾಮ ಘಟಕ ಬದ್ಧತೆಯಿಂದ ಕಾರ್ಯನಿರ್ವಹಿಸಲಿದೆ," ಎಂದು ತಿಳಿಸಿದರು.

### ನೂತನ ಪದಾಧಿಕಾರಿಗಳು

- ಅಧ್ಯಕ್ಷರು (ಜಾಲಹಳ್ಳಿ ಹೋಬಳಿ): ಶರಣಬಸವ ತಂದೆ ನಾಗಪ್ಪ ಹಡಪದ (ಅವಿರೋಧ ಆಯ್ಕೆ)
- ಗೌರವ ಅಧ್ಯಕ್ಷರು: ಅಮರೇಶ ಗಾಣದಾಳ
- ಉಪಾಧ್ಯಕ್ಷರು: ದೇವರಾಜ ಮುಂಡರಗಿ
- ಪ್ರಧಾನ ಕಾರ್ಯದರ್ಶಿ: ಶರಣಬಸವ ತಂದೆ ತಿಪ್ಪಣ್ಣ ಜಾಲಹಳ್ಳಿ
- ಸಂಘಟನಾ ಕಾರ್ಯದರ್ಶಿ: ಮಧು ತಂದೆ ಮಾರ್ತಂಡಪ್ಪ ಜಾಲಹಳ್ಳಿ
- ಖಜಾಂಚಿ: ಮಲ್ಲಿಕಾರ್ಜುನ್ ಜಾಲಹಳ್ಳಿ
- ಕಾನೂನು ಸಲಹೆಗಾರರು: ಶರಣಬಸವ ಗಲಗ
- ಸಹ ಕಾರ್ಯದರ್ಶಿ: ದೇವರಾಜ್ ಜಾಲಹಳ್ಳಿ

# ಟಿಇಟಿ ಹಾಗೂ ಸಿಇಟಿ ಪರೀಕ್ಷಾ ತರಬೇತಿ ಕಾರ್ಯಾಗಾರ



❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಪ್ರತಿಷ್ಠಿತ ವಿ.ವಿ. ಸಂಘದ ಶ್ರೀ ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯ ಇದರ ಐಕ್ಯೂಎಸಿ (IQAC) ಹಾಗೂ ಕೌಶಲ್ಯ ಅಭಿವೃದ್ಧಿ ಘಟಕದ ಸಂಯುಕ್ತ ಆಶ್ರಯದಲ್ಲಿ ಟಿಇಟಿ ಹಾಗೂ ಸಿಇಟಿ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕಾರ್ಯಾಗಾರ ಯಶಸ್ವಿಯಾಗಿ ಗುರುವಾರ ನಡೆಯಿತು.**

ಮುಖ್ಯ ಅತಿಥಿ ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ಶ್ರೀಮತಿ ಸಣ್ಣ ಸಂಗಮ್ಮ ಮುತ್ತಗಿ ಸಹ ಶಿಕ್ಷಕರು ಸರ್ಕಾರಿ ಪ್ರಾಥಮಿಕ ಶಾಲೆ, ಬೈಲಾಪುರ ತಾಂಡಾ ಅವರು ಇಂಗ್ಲಿಷ್ ವಿಷಯದ ಗ್ರಾಮರ್, ಟಿಇಟಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಮಾದರಿ, ಸಮಯ ನಿರ್ವಹಣೆ ಹಾಗೂ ಪರಿಣಾಮಕಾರಿ ಪರೀಕ್ಷಾ ಸಿದ್ಧತಾ ವಿಧಾನಗಳ ಕುರಿತು ಸಮಗ್ರ ಮಾಹಿತಿ ನೀಡಿದರು. ವಿದ್ಯಾರ್ಥಿಗಳು ಹಿಂದಿನ ವರ್ಷಗಳ ಪ್ರಶ್ನೆಪತ್ರಿಕೆಗಳ ಅಭ್ಯಾಸ, ವಿಷಯವಾರು ಪುನರಾವರ್ತನೆ ಹಾಗೂ ಸಮಯ ಪಾಲನೆಗೆ ಹೆಚ್ಚಿನ ಆದ-್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಐಕ್ಯೂಎಸಿ ಸಂಯೋಜಕ ಪ್ರೊ.ಯು.ಎನ್. ಮಂಗೊಂಡ ಅವರು ಮಾತನಾಡಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಯೋಜಿತ ಅಧ್ಯಯನ, ಸಮಯದ ಸಮರ್ಪಕ ನಿರ್ವಹಣೆ ಹಾಗೂ ನಿರಂತರ ಅಭ್ಯಾಸ ಅಗತ್ಯವೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೌಶಲ್ಯ ಅಭಿವೃದ್ಧಿ ಘಟಕದ ಸಂಯೋಜಕರಾದ ಪ್ರೊ. ಸುರೇಶ ಬಡಿಗೇರ ಉಪಸ್ಥಿತರಿದ್ದರು. ಪ್ರಶಿಕ್ಷಣಾರ್ಥಿ ನೇತ್ರಾವತಿ ಸ್ವಾಗತಿಸಿ ಅತಿಥಿಗಳನ್ನು ಪರಿಚಯಿಸಿದರು. ದೀಪಿಕಾ ಕಾರ್ಯಕ್ರಮವನ್ನು ನಿರೂಪಿಸಿದರು. ಭಾಗ್ಯವಂತಿ ಪುಷ್ಪಾರ್ಪಣೆ ನೆರವೇರಿಸಿದರು. ವರ್ಷಾ ತೊಂಡಿಹಾಳ ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಬೋಧಕ ವೃಂದ ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದು, ತರಬೇತಿಯ ಪ್ರಯೋಜನ ಪಡೆದುಕೊಂಡರು.

# ಗಲಗ ಜ್ಞಾನಲಹರಿ ಶಾಲೆಯಲ್ಲಿ ಗುರುಪೂರ್ಣಿಮೆ ಸಂಭ್ರಮ : ಶಿವಲಿಂಗ-ಬಸವ ಪ್ರತಿಮೆ ಪ್ರತಿಷ್ಠಾಪನೆ

❑ ನೈಜ್ಯ ದೆಸೆ ನ್ಯೂಸ್

**ಅರಕೇರಾ: ತಾಲೂಕಿನ ಗಲಗ ಗ್ರಾಮದ ಶ್ರೀ ಪ್ರಭು ಸ್ವಾಮಿ ಎಜ್ಯುಕೇಶನ್ ಟ್ರಸ್ಟ್‌ನ ಅಡಿಯಲ್ಲಿ ನಡೆಯುತ್ತಿರುವ ಜ್ಞಾನಲಹರಿ ಪಬ್ಲಿಕ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಗುರುಪೂರ್ಣಿಮೆಯನ್ನು ಅತ್ಯಂತ ಶ್ರದ್ಧಾ-ಭಕ್ತಿಯಿಂದ ಆಚರಿಸಲಾಯಿತು. ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಂಸ್ಕಾರಪೂರ್ಣ ಕಾರ್ಯಕ್ರಮಗಳು ಮಕ್ಕಳು, ಪೋಷಕರು ಮತ್ತು ಶಿಕ್ಷಕರ ಮನಸ್ಸನ್ನು ತಣಿಸಿದವು.**

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ ಚನ್ನಬಸವ ಶಾಸ್ತ್ರಿ ಮಳಿ ಮಠ, ಗಲಗ ಅವರು ವಹಿಸಿಕೊಂಡಿದ್ದರು. ಅವರ ಮಾರ್ಗದರ್ಶನದಲ್ಲಿ ಸಮಗ್ರ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು. ಗುರುಪೂರ್ಣಿಮೆಯ ಶುಭ ಸಂದರ್ಭದಲ್ಲಿ ಶಾಲಾ ಆವರಣದಲ್ಲಿ ಶಿವಲಿಂಗ ಮತ್ತು ಬಸವಣ್ಣನ



ಪ್ರತಿಮೆಯನ್ನು ವಿಧಿವಿಧಾನಗಳೊಂದಿಗೆ ಪ್ರತಿಷ್ಠಾಪಿಸಲಾಯಿತು. ನಂತರ ಮಕ್ಕಳಿಗೆ ಅಕ್ಷರಾಭ್ಯಾಸ ಕಾರ್ಯಕ್ರಮ ಜರಗಿತು.

ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ ಮಕ್ಕಳು ತಮ್ಮ ತಂದೆ-ತಾಯಿಯಂದಿರಿಗೆ ಪಾದಪೂಜೆ ಸಲ್ಲಿಸಿದರು. ನಂತರ ಮಕ್ಕಳು ಪೋಷಕರಿಗೆ ಮತ್ತು ಪೋಷಕರು ಮಕ್ಕಳಿಗೆ ಪ್ರೀತಿಯಿಂದ ಕೈತುತ್ತು ಊಟ ಉಣಿಸಿದ ದೃಶ್ಯ ಎಲ್ಲರ ಮನ ಕರಗಿಸಿತು. ಈ ಮೂಲಕ ಪೋಷಕರು ಮತ್ತು ಮಕ್ಕಳ ನಡುವಿನ ಬಾಂಧವ್ಯವನ್ನು ಗಟ್ಟಿಗೊಳಿಸುವ ಪ್ರಯತ್ನವನ್ನು ಶಾಲೆಯು ಮಾಡಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಶಿವಲಿಂಗಯ್ಯ ಸ್ವಾಮಿ ಗಣಾಚಾರ್ಯ ಮಠ ರವರು ಮಾತನಾಡಿ, "ಪ್ರತಿಯೊಬ್ಬರ ಜೀವನದಲ್ಲೂ ಜನನಿಯೇ ಮೊದಲ ಗುರು. ತಾಯಿಯ ಆಶೀರ್ವಾದದಿಂದಲೇ ಮಗುವಿನ ಭವಿಷ್ಯ ರೂಪುಗೊಳ್ಳುತ್ತದೆ. ಇಂದಿನ ದಿನಗಳಲ್ಲಿ ಮಕ್ಕಳಿಗೆ ಸಂಸ್ಕಾರ ಮತ್ತು ಶಿಕ್ಷಣ ಎರಡೂ ಅತ್ಯಗತ್ಯ. ಈ ಶಾಲೆಯು ಗುರುಪೂರ್ಣಿಮೆಯನ್ನು ಅರ್ಥಪೂರ್ಣವಾಗಿ ಆಚರಿಸುವ ಮೂಲಕ ಮಕ್ಕಳಿಗೆ ಉತ್ತಮ ಮೌಲ್ಯಗಳನ್ನು ನೀಡಿದೆ" ಎಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಆಡಳಿತ ಮಂಡಳಿಯ ಪದಾಧಿಕಾ-ರಿಗಳು, ಶಿಕ್ಷಕ ವೃಂದ, ವಿದ್ಯಾರ್ಥಿಗಳು ಮತ್ತು ಅಪಾರ ಸಂಖ್ಯೆಯ ಪೋಷಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಶಿಕ್ಷಣದ ಜೊತೆಜೊತೆಗೆ ಸಂಸ್ಕಾರಕ್ಕೂ ಒತ್ತು ನೀಡಿದ ಈ ವಿಶಿಷ್ಟ ಆಚರಣೆಗೆ ಪೋಷಕರು ಮತ್ತು ಸಾರ್ವಜನಿಕರಿಂದ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ.

# ಸಾಮಾಜಿಕ ಮೌಲ್ಯಗಳನ್ನು ಕಾಪಾಡುವಲ್ಲಿ ಪತ್ರಕರ್ತರ ಪಾತ್ರ ಮಹತ್ವದ್ದು: ಡಾ. ನಂದು ಪೂಜಾರಿ

❑ ನೈಜ್ಯ ದೆಸೆ ನ್ಯೂಸ್

**ಸುರಪುರ: ಪತ್ರಕರ್ತರು ಸಾಮಾಜಿಕ ಜವಾಬ್ದಾ-ರಿಯೊಂದಿಗೆ ಕಾರ್ಯನಿರ್ವಹಿಸುವ ಮೂಲಕ ಸಮಾಜದಲ್ಲಿ ಉತ್ತಮ ಮೌಲ್ಯಗಳನ್ನು ಬೆಳೆಸುವಲ್ಲಿ ಹಾಗೂ ಸಾಮಾಜಿಕ ಮೌಲ್ಯಗಳನ್ನು ಕಾಪಾಡುವಲ್ಲಿ ವಿಶಿಷ್ಟ ಪಾತ್ರ ವಹಿಸುತ್ತಾರೆ ಎಂದು ಕರ್ನಾಟಕ ಪ್ರೆಸ್ ಕ್ಲಬ್‌ನ ಸಂಘಟನಾ ಕಾರ್ಯದರ್ಶಿ ಡಾ. ನಂದು ಪೂಜಾರಿ ಹೇಳಿದರು.**

ಪಟ್ಟಣದ ವಾಲ್ಮೀಕಿ ಭವನದಲ್ಲಿ ಕರ್ನಾಟಕ ಪ್ರೆಸ್ ಕ್ಲಬ್ ವತಿಯಿಂದ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದ ಅವರು, ಪತ್ರಿಕೋದ್ಯಮವು ಕೇವಲ ಸುದ್ದಿಯನ್ನು ಪ್ರಸಾರ ಮಾಡುವ ಮಾಧ್ಯಮವಲ್ಲ, ಸಮಾಜದ ಧ್ವನಿಯಾಗಿ ಕಾರ್ಯನಿರ್ವಹಿಸುವ



ಜವಾಬ್ದಾರಿಯುತ ಕ್ಷೇತ್ರವಾಗಿದೆ ಪತ್ರಕರ್ತರು ನಿಷ್ಪಕ್ಷಪಾತತೆ, ಪ್ರಾಮಾಣಿಕತೆ ಹಾಗೂ ಸಮಾಜಮುಖಿ ದೃಷ್ಟಿಕೋನವನ್ನು ಅಳವಡಿಸಿಕೊಂಡು ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು. ಸತ್ಯ ಮತ್ತು ನ್ಯಾಯದ ಪರವಾಗಿ ನಿಲ್ಲುವ ಮೂಲಕ ಸಮಾಜದ ಅಭಿವೃದ್ಧಿಗೆ ಪತ್ರಕರ್ತರು ತಮ್ಮದೇ ಆದ ಕೊಡುಗೆಯನ್ನು ನೀಡಬೇಕೆಂದರು ಸಾನಿಧ್ಯ ವಹಿಸಿ ಮಾತನಾಡಿದ ರುಕ್ಮಾಪುರ, ಸಂಸ್ಥಾನ ಹಿರೇಮಠದ ಪ ಬ್ರ ಗುರು ಶಾಂತಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ, ಪತ್ರಿಕೆಗಳು ಸಮಾಜವನ್ನು ಶುದ್ಧವಾಗಿಡುವುದರ ಜೊತೆಗೆ, ಎಲ್ಲ ವರ್ಗದ ಜನರನ್ನು ಬೆಳಕಿನ ಕಡೆಗೆ ಕರೆದೊಯ್ಯುವ ಮಹತ್ವದ ಕೆಲಸವನ್ನು ಮಾಡುತ್ತವೆ ಎಂದರು.

ಕರ್ನಾಟಕ ಪ್ರೆಸ್ ಕ್ಲಬ್ ನ ರಾಜ್ಯ ಗೌರವ ಅಧ್ಯಕ್ಷ ದಯಾನಂದ ಎಂ. ಮಾತನಾಡಿ. ಕರ್ನಾಟಕ ಪ್ರೆಸ್ ಕ್ಲಬ್ ಒಂದು ಸಮಾಜಮುಖಿ ಕಾರ್ಯವಾಗಿ ರಾಜ್ಯದಲ್ಲಿ ಉತ್ತಮ ಕೆಲಸಗಳನ್ನು ಮಾಡುತ್ತಿದ್ದು, ಈ ಭಾಗದಲ್ಲಿ ಪ್ರಥ-ಮ ಬಾರಿಗೆ ಇಂತಹ ಸಕ್ರಿಯ ಕಾರ್ಯಚಟುವಟಿ-ಕೆಗಳು ನಡೆಯುತ್ತಿರುವುದು ಶ್ಲಾಘನೀಯ ಪತ್ರಕರ್ತರು ಸಮಾಜದ ನೈತಿಕ ಮೌಲ್ಯಗಳನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಸತ್ಯ, ನ್ಯಾಯ ಮತ್ತು ಜನಪರ ದೃಷ್ಟಿಕೋನವನ್ನು ಅಳವಡಿಸಿಕೊಂಡು ಸಮಾಜದ ಬೆಳವಣಿಗೆಗೆ ಪತ್ರಿಕೆಗಳು ದಾರಿ ತೋರಿಸುತ್ತವೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು. ತಾಲೂಕು ಅಧ್ಯಕ್ಷ ಗಂಗಾಧರ ನಾಯಕ ವಹಿಸಿದ್ದರು. ಮುಖ್ಯ ಅತಿಗಳಾಗಿ ರಾಜ್ಯ ಉಪಾಧ್ಯಕ್ಷ ಹಲಗಿ ಸುರೇಶ.ಉತ್ತರ ಕರ್ನಾಟಕ ವಿಭಾಗದ್ಯಾಕ್ಷ ಮಹೇಶ ಕುಂಬಾರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ದರಾಮು ಎಂ ಸೇರಿದಂತೆ ಕರ್ನಾಟಕ ಪ್ರೆಸ್ ಕ್ಲಬ್‌ನ ತಾಲ್ಲೂಕು ಘಟಕದ ಪದಾಧಿಕಾರಿಗಳು, ಸದಸ್ಯರು ಅಧಿಕಾರಿಗಳು, ಗಣ್ಯರು ಇತರರು ಇದ್ದರು. ನಂತರ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಗೌರವಿಸಿ ಸನ್ಮಾನಿಸಲಾಯಿತು.

# ನೇಮಕಾತಿ ಪ್ರಕಟಣೆ

**ಏಖಒಅಐ ನೇಮಕಾತಿ 2026 ? 50 ಇಂಜಿನಿಯರ್ ಮತ್ತು ಎಲೆಕ್ಟ್ರಿಷಿಯನ್ ಹುದ್ದೆಗಳಿಗೆ ನೇರ ಸಂದರ್ಶನ (Walk-in Interview) ಜುಲೈ 21, 2026**

KSMCL ನೇಮಕಾತಿ 2026: 50 ಇಂಜಿನಿಯರ್ ಮತ್ತು ಎಲೆಕ್ಟ್ರಿಷಿಯನ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್ (KSMCL) ತನ್ನ ಜುಲೈ 2026ರ ಅಧಿಕೃತ ಅಧಿಸೂಚನೆಯ ಮೂಲಕ ಇಂಜಿನಿಯರ್ ಮತ್ತು ಎಲೆಕ್ಟ್ರಿಷಿಯನ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ ಕರ್ನಾಟಕ ಸರ್ಕಾರದ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 31-ಜುಲೈ-2026 ರಂದು ನಡೆಯುವ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು. ಅಧಿಕೃತ ವೆಬ್‌ಸೈಟ್: ksmc.karnataka.gov.in

## ಮಕ್ಕಳ ಉತ್ತಮ ಆರೋಗ್ಯಕ್ಕೆ ಪೌಷ್ಟಿಕಾಹಾರ,ಸ್ವಚ್ಛತೆ ಅಗತ್ಯ: ಡಾ.ಜಿಎಸ್ ಮಲ್ಲೇಶಗೌಡ ಪಾಟೀಲ್

❑ ನೈಜ್ಯ ದೆಸೆ ನ್ಯೂಸ್

ಹಾಲಾಪೂರ: ಸಮೀಪದ ಯದ್ದಲದಿನ್ನಿ ಸ್ವ ಗ್ರಾಮದ ಡಾ.ಜಿಎಸ್ ಮಲ್ಲೇಶಗೌಡ ಪಾಟೀಲ್ ಖ್ಯಾತ ಮಕ್ಕಳ ತಜ್ಞರು ಮತ್ತು ನ್ಯೂ ಅಮೃತ ಮಕ್ಕಳ ಆಸ್ಪತ್ರೆ ರಾಯಚೂರು, ಇವರು ಪತ್ರಿಕೆಯೊಂದಿಗೆ ಮಾತನಾಡಿ ಇಂದಿನ ದಿನಗಳಲ್ಲಿ ಮಕ್ಕಳ ಬಗ್ಗೆ ಪಾಲಕರು ಆರೋಗ್ಯ ಕಾಳಜಿ ವಹಿಸಬೇಕು, ಮುಖ್ಯವಾಗಿ ಉತ್ತಮವಾದ ಪೌಷ್ಟಿಕಾಂಶಯುಳ್ಳ ಆಹಾರ,ಸ್ವಚ್ಛತೆ ,ಒಳ್ಳೆಯ ನಿದ್ದೆ ನಿಯಮಿತ ಲಸಿಕೆಗಳನ್ನು ಕೊಡಿಸಬೇಕು.



ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಪೋಷಕರು ವಿಶೇಷ ಕಾಳಜಿವಹಿಸಬೇಕು. ಮಕ್ಕಳಿಗೆ ಮೊಬೈಲ್ ನಿಂದ ದೂರ ಇಡಬೇಕು ಅದರಿಂದ ಮಕ್ಕಳ ಮೇಲೆ ಗಂಭೀರ ಪರಿಣಾಮ ಬೀರುತ್ತದೆ, ಅದಕ್ಕೆ ತಂದೆತಾಯಿಗಳು ಮಕ್ಕಳಿಗೆ ಮೊಬೈಲ್ ನಿಂದ ಸಾಧ್ಯವಾದಷ್ಟು ದೂರ ಇಡುವ ಕೆಲಸ ಮಾಡಬೇಕು, ಉತ್ತಮ ಆಟ ಹಾಡು ಸಂಗೀತ, ಜಾನಪದ ಇಂತಹ ಒಂದು ಒಳ್ಳೆಯ ರೂಢಿಯನ್ನು ಮಕ್ಕಳಿಗೆ ಬೆಳೆಸಬೇಕು ಇದರಿಂದ ಮಾನಸಿಕ ಮಟ್ಟ ಸುಧಾರಣೆ, ಓದುವ ಅಭಿರುಚಿ ಬೆಳೆಯುತ್ತದೆ ಎಂದು ಡಾ.ಜಿಎಸ್ ಮಲ್ಲೇಶಗೌಡ ಪಾಟೀಲ್ ಮಕ್ಕಳ ತಜ್ಞರು ಪತ್ರಿಕೆಯೊಂದಿಗೆ ಮಾತನಾಡಿದರು.

## ಡಿ.ಎನ್. ಸಲ್ಯೂಷನ್ಸ್‌ನಲ್ಲಿ ವಿಜಯಪುರದ 20ವಿದ್ಯಾರ್ಥಿಗಳಿಗೆ ಉದ್ಯೋಗ ಆಗಸ್ಟ್ 26ರಿಂದ ಕಾರ್ಯಾರಂಭ; ಮೊದಲ ಹಂತದಲ್ಲೇ 400 ಎಂಜಿನಿಯರ್‌ಗಳಿಗೆ ಅವಕಾಶ ಉತ್ತರ ಕರ್ನಾಟಕದ 117 ಯುವಕರಿಗೆ ಉದ್ಯೋಗ

❑ ನೈಜ್ಯ ದೆಸೆ ನ್ಯೂಸ್

**ವಿಜಯಪುರ:ಜಾಗತಿಕಮಟ್ಟದಕೈಗಾರಿಕಾದೈತ್ಯಡಿ.ಎನ್.ಸಲ್ಯೂಷನ್ಸ್ ರಾಜ್ಯದಲ್ಲಿ ಆಗಸ್ಟ್ 26ರಿಂದ ಕಾರ್ಯಾರಂಭ ಮಾಡಲಿದ್ದು, ಮೊದಲ ಹಂತದಲ್ಲೇ 400 ಎಂಜಿನಿಯರ್‌ಗಳಿಗೆ ಉದ್ಯೋಗ ನೀಡಲಿದೆ.**



ಈ ಪೈಕಿ ವಿಜಯಪುರದ ಬಿ.ಎಲ್.ಡಿ.ಇ. ಎಂಜಿನಿಯರಿಂಗ್ ಕಾಲೇಜಿನ 8 ಹಾಗೂ ಬಿ.ಎಲ್.ಡಿ.ಇ. ಸಂಸ್ಥೆಯ ಶ್ರೀ ಸಂಗನಬಸವ ಮಹಾಸ್ವಾಮೀಜಿ ಪಾಲಿಟೆಕ್ನಿಕ್ ಕಾಲೇಜಿನ 12 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 20 ವಿದ್ಯಾರ್ಥಿಗಳು ಉದ್ಯೋಗ ಪಡೆದುಕೊಂಡಿದ್ದಾರೆ ಎಂದು ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ತಿಳಿಸಿದ್ದಾರೆ. ಈ ಕಂಪನಿಯಲ್ಲಿ ಉದ್ಯೋಗ ಪಡೆಯುವುದು ಹೆಮ್ಮೆಯ ಸಂಗತಿಯಾಗಿದೆ. ಮೊದಲ ಹಂತದಲ್ಲಿ ಉದ್ಯೋಗ ಪಡೆದ 400 ಯುವಕರ ಪೈಕಿ ಉತ್ತರ ಕರ್ನಾಟಕದ 117 ಮಂದಿಗೆ ಅವಕಾಶ ದೊರೆತಿರುವುದು ಸಂತಸದ ವಿಷಯವಾಗಿದೆ ಎಂದು ಅವರು ಹೇಳಿದ್ದಾರೆ. ದಕ್ಷಿಣ ಕೊರಿಯಾದ ನಂ.1 ಹಾಗೂ ವಿಶ್ವದ ಮೂರನೇ ಅತಿದೊಡ್ಡ ಮೆಟಲ್-ಕಟಿಂಗ್ ಮೆಷಿನ್ ತಯಾರಿಕಾ ಸಂಸ್ಥೆಯಾಗಿರುವ ಡಿ. ಎನ್. ಸಲ್ಯೂಷನ್ಸ್, ಈ ವರ್ಷದ ಫೆಬ್ರವರಿಯಿಂದ ಕರ್ನಾಟಕದಲ್ಲಿ ತನ್ನ ಮಹತ್ವಾಕಾಂಕ್ಷಿ ಉತ್ಪಾದನಾ ಘಟಕದ ನಿರ್ಮಾಣ ಕಾರ್ಯ ಆರಂಭಿಸಿದೆ. ದೇವನಹಳ್ಳಿ ಐಟಿಐಆರ್ ಸಮೀಪ ಸುಮಾರು ?1,000 ಕೋಟಿ ಹೂಡಿಕೆಯಲ್ಲಿ 10 ಎಕರೆ ಪ್ರದೇಶದಲ್ಲಿ ನಿರ್ಮಾಣವಾಗುತ್ತಿರುವ ಈ ಘಟಕವನ್ನು ಆಗಸ್ಟ್ 26ರಂದು ಉದ್ಘಾಟಿಸಲಾಗುತ್ತಿದೆ. ರಾಜ್ಯ ಸರ್ಕಾರಕ್ಕೆ ಬಂದಿರುವ ಹೂಡಿಕೆಗಳು ಕೇವಲ ಒಪ್ಪಂದಗಳಾಗಿ ಉಳಿಯದೆ, ಅನುಷ್ಠಾನಗೊಂಡು ಉದ್ಯೋಗಗಳನ್ನು ಸೃಷ್ಟಿಸುವ ಮೂಲಕ ರಾಜ್ಯದ ಯುವ ಸಮೂಹದ ಭವಿಷ್ಯ ರೂಪಿಸುತ್ತಿವೆ ಎಂದು ಸಚಿವ ಎಂ. ಬಿ. ಪಾಟೀಲ ಹೇಳಿದರು.

# ಕೃಷ್ಣಾ ನದಿಯ ಹರಿವು ಹೆಚ್ಚಳ: ನಾರಾಯಣಪುರ ಜಲಾಶಯದಿಂದ 90,000 ಕ್ಯೂಸೆಕ್‌ವರೆಗೆ ನೀರು ಬಿಡುಗಡೆ ದೇವದುರ್ಗ ತಾಲೂಕು ಆಡಳಿತದಿಂದ ಮುನ್ನೆಚ್ಚರಿಕೆ

❑ ನೈಜ್ಯ ದೆಸೆ ನ್ಯೂಸ್

ಹೂವಿನಹಡಗಿ: ಕೃಷ್ಣಾ ನದಿಯಲ್ಲಿ ನೀರಿನ ಹರಿವು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ನಾರಾಯಣಪುರ (ಬಸವಸಾಗರ) ಜಲಾಶಯದಿಂದ ಸದ್ಯ ಸುಮಾರು 90,000 ಕ್ಯೂಸೆಕ್‌ವರೆಗೆ ನೀರನ್ನು ಕೃಷ್ಣಾ ನದಿಗೆ ಬಿಡುಗಡೆ ಮಾಡಲಾಗುತ್ತಿದೆ. ಇದರ ಪರಿಣಾಮ ದೇವದುರ್ಗ ತಾಲೂಕಿನ ಹೂವಿನಹಡಗಿ ಸೇತುವೆ ಮುಳುಗಡೆ ಹಂತದ ಸಮೀಪಸುತ್ತಿರುವುದು ಸಾರ್ವಜನಿಕರು ಹಾಗೂ ವಾಹನ ಸವಾರರಲ್ಲಿ ಆತಂಕ ಉಂಟಾಗಿದೆ.

ಆಲಮಟ್ಟಿ ಹಾಗೂ ನಾರಾಯಣಪುರ ಜಲಾಶಯಗಳು ಬಹುತೇಕ ಭರ್ತಿಯಾಗಿರುವುದ-ರಿಂದ ಒಳಹರಿವಿಗೆ ಅನುಗುಣವಾಗಿ ನೀರನ್ನು ಹಂತ ಹಂತವಾಗಿ ಬಿಡುಗಡೆ ಮಾಡಲಾಗುತ್ತಿದೆ. ಇದ-ರಿಂದ ಕೃಷ್ಣಾ ನದಿಯ ನೀರಿನ ಮಟ್ಟ ಕ್ಷಣಕ್ಷಣಕ್ಕೂ ಏರಿಕೆಯಾಗುತ್ತಿದ್ದು, ನದಿ ಪಾತ್ರದ ಎಲ್ಲಾ ಗ್ರಾಮಗಳ ಪರಿಸ್ಥಿತಿಯ ಮೇಲೆ ದೇವದುರ್ಗ ತಾಲೂಕ ಅಧಿಕಾರಿಗಳು ನಿರಂತರ ನಿಗಾ ವಹಿಸಿದ್ದಾರೆ.




ಇನ್ನಷ್ಟು ಪ್ರಮಾಣದಲ್ಲಿ ನೀರು ಬಿಡುಗಡೆಗೊಂಡರೆ ನಾರಾಯಣಪುರ ಜಲಾಶಯದಿಂದ ಎರಡು ಲಕ್ಷ ಕ್ಯೂಸೆಕ್ಸ್ ವರೆಗೆ ನೀರು ಬಿಟ್ಟರೆ ಹೂವಿನಹಡಗಿ ಸೇತುವೆ ಮುಳುಗುವ ಸಾಧ್ಯತೆ ಇರುವುದರಿಂದ, ನದಿ ಪಾತ್ರದ ಗ್ರಾಮಗಳ ನಿವಾಸಿಗಳು ಹಾಗೂ ವಾಹನ ಸವಾರರು ಅಗತ್ಯ ಮುನ್ನೆಚ್ಚರಿಕೆ ವಹಿಸಿ, ತಾಲೂಕು ಆಡಳಿತದ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮನವಿ ಮಾಡಲಾಗಿದೆ.

### ಜಲಾಶಯದ ಪ್ರಮುಖ ಮಾಹಿತಿ

ದಿನಾಂಕ29-07-2026

- ಹೊರಹರಿವು (Outflow): ಸುಮಾರು 35,000 ರಿಂದ 90,000 ಕ್ಯೂಸೆಕ್
- ಒಳಹರಿವು (Inflow): ಮೇಲ್ಭಾಗದ ಜಲಾಶಯಗಳು ಹಾಗೂ ನಿರಂತರ ಮಳೆಯಿಂದ ಗಣನೀಯ ಪ್ರಮಾಣದ ನೀರಿನ ಹರಿವು
- ಜಲಾಶಯದ ಸ್ಥಿತಿ: ಗರಿಷ್ಠ ಸಂಗ್ರಹ ಮಟ್ಟದ ಸಮೀಪ (ಶೇ. 97 ಕ್ಕಿಂತ ಹೆಚ್ಚು)

### ವಿಶೇಷ ಮಾಹಿತಿ

ದೇವದುರ್ಗ ತಹಸೀಲ್ದಾರ್ ಶ್ರೀಮತಿ ನಾಗಮ್ಮ ಕಟ್ಟಿಮನಿ ಅವರು ಮಾತನಾಡಿ, ನದಿ ಪಾತ್ರದ ಎಲ್ಲಾ ಗ್ರಾಮಗಳಿಗೆ ಕಂದಾಯ ಇಲಾಖೆಯಿಂದ ಈಗಾಗಲೇ ಮುನ್ನೆಚ್ಚರಿಕೆ ಮಾಹಿತಿ ನೀಡಲಾಗಿದೆ ಎಂದು ತಿಳಿಸಿದರು.

ಅವರು, "ಸದ್ಯ ನಾರಾಯಣಪುರ ಜಲಾಶಯದಿಂದ ಸುಮಾರು 35,000 ರಿಂದ 90,000 ಕ್ಯೂಸೆಕ್‌ವರೆಗೆ ನೀರು ಬಿಡುಗಡೆ ಮಾಡಲಾಗುತ್ತಿದೆ. ಸುಮಾರು 2 ಲಕ್ಷದಿಂದ 2.5 ಲಕ್ಷ ಕ್ಯೂಸೆಕ್‌ವರೆಗೆ ನೀರು ಬಿಡುಗಡೆ ಮಾಡಿದಾಗ ಮಾತ್ರ ಹೂವಿನಹಡಗಿ ಸೇತುವೆ ಮುಳುಗುವ ಸಾಧ್ಯತೆ ಇದೆ. ಪರಿಸ್ಥಿತಿಯ ಮೇಲೆ ನಿರಂತರ ನಿಗಾ ವಹಿಸಲಾಗಿದ್ದು, ನದಿ ಪಾತ್ರದ ಎಲ್ಲಾ ಗ್ರಾಮದ ನಿವಾಸಿಗಳಿಗೆ ಮಾಹಿತಿ ನೀಡಲಾಗಿದ್ದು ಆತಂಕಪಡದೆ ಆಡಳಿತದ ಸೂಚನೆಗಳನ್ನು ಪಾಲಿಸಬೇಕು," ಎಂದು ಹೇಳಿದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

# ಸುರಪುರದಲ್ಲಿ ಪತ್ರಿಕಾ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಣೆ

❑ ನೈಜ್ಯ ದೆಸೆ ನ್ಯೂಸ್

**ಸುರಪುರ: ಯಾದಗಿರಿ ಜಿಲ್ಲೆಯ ಸುರಪುರದಲ್ಲಿ ಕರ್ನಾಟಕ ಪ್ರೆಸ್ ಕ್ಲಬ್ (ರಿ) ವತಿಯಿಂದ ಪತ್ರಿಕಾ ದಿನಾಚರಣೆಯನ್ನು ಅತ್ಯಂತ ವಿಜೃಂಭಣೆ ಹಾಗೂ ಸಡಗರದಿಂದ ಆಚರಿಸಲಾಯಿತು.**

ಸಮಾಜದಮುಖಿ ಚಿಂತನೆಗಳು ಮತ್ತು ಪತ್ರಿಕಾ ಸ್ವಾತಂತ್ರ್ಯದ ಮಹತ್ವವನ್ನು ಸಾರುವ ಈ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಿತು. ಈ ವಿಶೇಷ ಸಮಾರಂಭದಲ್ಲಿ ಕೃಷಿ ಕ್ಷೇತ್ರ, ಮಾಧ್ಯಮ ಕ್ಷೇತ್ರ, ವೈದ್ಯಕೀಯ ಕ್ಷೇತ್ರ ಹಾಗೂ ಸಾಮಾಜಿಕ ಸೇವೆಯಲ್ಲಿ ನಿಸ್ವಾರ್ಥವಾಗಿ ತೊಡಗಿಸಿಕೊಂಡು, ಸಮಾಜಕ್ಕೆ ಮಾದ-ರಿಯಾಗಿರುವ ಯಾದಗಿರಿ ಜಿಲ್ಲೆ ಮತ್ತು ಸುರಪುರ ತಾಲೂಕಿನ ಹಲವು ಗಣ್ಯ ವ್ಯಕ್ತಿಗಳನ್ನು ಗುರುತಿಸಿ ಸನ್ಮಾನಿಸಿ ಗೌರವಿಸಲಾಯಿತು.




ಸಮಾಜದ ವಿವಿಧ ರಂಗಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಕೃಷಿಕರು, ವೈದ್ಯರು, ಸಮಾಜ ಸೇವಕರು ಹಾಗೂ ಪತ್ರಕರ್ತರನ್ನು ಸತ್ಕರಿಸಲಾಯಿತು.

ಪ್ರಜಾಪ್ರಭುತ್ವದ ನಾಲ್ಕನೇಂಗವಾದ ಮಾಧ್ಯಮವು ಸಮಾಜದ ಅಂಕುಡೊಂಕುಗಳನ್ನು ತಿದ್ದುವಲ್ಲಿ ಮತ್ತು ಜನಸಾಮಾನ್ಯರ ಧ್ವನಿಯಾಗುವಲ್ಲಿ ವಹಿಸುತ್ತಿರುವ ಪಾತ್ರದ ಕುರಿತು ವಕ್ತಾರರು ಬೆಳಕು ಚೆಲ್ಲಿದರು. ಈ ಕಾರ್ಯಕ್ರಮದಲ್ಲಿ ಕರ್ನಾಟಕ ಪ್ರೆಸ್ ಕ್ಲಬ್ (ರಿ) ಯಾದಗಿರಿ ಜಿಲ್ಲೆ ಹಾಗೂ ಸುರಪುರ ತಾಲೂಕಿನ ಪದಾಧಿಕಾರಿಗಳು, ಹಿರಿಯ ಪತ್ರಕರ್ತರು ಮತ್ತು ಸ್ಥಳೀಯ ಗಣ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಅರೆಕಾಲಿಕ ಭೋದಕರ ನೇಮಕ್ಕೆ ಅರ್ಜಿ ಆಹ್ವಾನ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು ಜುಲೈ 29 (ಕರ್ನಾಟಕ ವಾರ್ತೆ): ರಾಯಚೂರು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2026-2027ನೇ ಸಾಲಿನಲ್ಲಿ ತಾಲ್ಲೂಕಿನ ಮೆಟ್ರಿಕ ಪೂರ್ವ ವಸತಿ ನಿಲಯಗಳಲ್ಲಿ ವಿದಾರ್ಥಿಗಳ ಶೈಕ್ಷಣಿಕ ಗುಣಮಟ್ಟ ಉತ್ತಮಪಡಿಸಲು ಗಣಿತ, ವಿಜ್ಞಾನ ಮತ್ತು ಇಂಗ್ಲೀಷ ಭಾಷಾ ವಿಷಯಗಳಿಗೆ ಸಂಬಂಧಿಸಿದಂತೆ ಅರೆಕಾಲಿಕ ಭೋದಕರನ್ನು ಗೌರವ ಧನದ ಮೇಲೆ ನೇಮಕ್ಕೆ ಅರ್ಜಿ ಆಹ್ವಾನಿಸಲಾಗಿದೆ.**

ಚಂದ್ರ ಬಂಡ ಮೆಟ್ರಿಕ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಗಣಿತ 01 ಹುದ್ದೆಗೆ ಬಿ.ಎಸ್ಸಿ.ಬಿಇಡ್ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳಿಗೆ ಮಾಸಿಕವಾಗಿ 3000 ಗೌರವಧನವನ್ನು ನೀಡಲಾಗುವುದು. ಇಂಗ್ಲೀಷ್ 01 ಹುದ್ದೆಗೆ ಬಿ.ಎ.,ಬಿಇಡ್ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳಿಗೆ ಮಾಸಿಕವಾಗಿ 3000 ಗೌರವಧನವನ್ನು ನೀಡಲಾಗುವುದು. ವಿಜ್ಞಾನ 01 ಹುದ್ದೆಗೆ ಬಿ.ಎಸ್ಸಿ.ಬಿಇಡ್ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳಿಗೆ ಮಾಸಿಕವಾಗಿ 3000 ಗೌರವಧನವನ್ನು ನೀಡಲಾಗುವುದು. ಗುಂಜಳ್ಳಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಗಣಿತ 01 ಹುದ್ದೆಗೆ ಬಿ.ಎಸ್ಸಿ.ಬಿಇಡ್ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳಿಗೆ ಮಾಸಿಕವಾಗಿ 3000 ಗೌರವಧನವನ್ನು ನೀಡಲಾಗುವುದು. ಇಂಗ್ಲೀಷ್ 01 ಹುದ್ದೆಗೆ ಬಿ.ಎ.,ಬಿಇಡ್ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳಿಗೆ ಮಾಸಿಕವಾಗಿ 3000 ಗೌರವಧನವನ್ನು ನೀಡಲಾಗುವುದು. ವಿಜ್ಞಾನ 01 ಹುದ್ದೆಗೆ ಬಿ.ಎಸ್ಸಿ.ಬಿಇಡ್ ವಿದ್ಯಾರ್ಹತೆ




ಪಡೆದ ಅಭ್ಯರ್ಥಿಗಳಿಗೆ ಮಾಸಿಕವಾಗಿ 3000 ಗೌರವಧನವನ್ನು ನೀಡಲಾಗುವುದು. ಇಡಪನೂರು ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಗಣಿತ 01 ಹುದ್ದೆಗೆ ಬಿ.ಎಸ್ಸಿ.ಬಿಇಡ್ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳಿಗೆ ಮಾಸಿಕವಾಗಿ 3000 ಗೌರವಧನವನ್ನು ನೀಡಲಾಗುವುದು.

ಇಂಗ್ಲೀಷ್ 01 ಹುದ್ದೆಗೆ ಬಿ.ಎ.,ಬಿಇಡ್ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳಿಗೆ ಮಾಸಿಕವಾಗಿ 3000 ಗೌರವಧನವನ್ನು ನೀಡಲಾಗುವುದು. ವಿಜ್ಞಾನ 01 ಹುದ್ದೆಗೆ ಬಿ.ಎಸ್ಸಿ.ಬಿಇಡ್ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳಿಗೆ ಮಾಸಿಕವಾಗಿ 3000 ಗೌರವಧನವನ್ನು ನೀಡಲಾಗುವುದು. ಕಲ್ಮಲಾ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಗಣಿತ 01 ಹುದ್ದೆಗೆ ಬಿ.ಎಸ್ಸಿ.ಬಿಇಡ್ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳಿಗೆ ಮಾಸಿಕವಾಗಿ 3000 ಗೌರವಧನವನ್ನು ನೀಡಲಾಗುವುದು. ಇಂಗ್ಲೀಷ್ 01 ಹುದ್ದೆಗೆ ಬಿ.ಎ.,ಬಿಇಡ್ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳಿಗೆ ಮಾಸಿಕವಾಗಿ 3000 ಗೌರವಧನವನ್ನು ನೀಡಲಾಗುವುದು. ವಿಜ್ಞಾನ 01 ಹುದ್ದೆಗೆ ಬಿ.ಎಸ್ಸಿ.ಬಿಇಡ್ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳಿಗೆ ಮಾಸಿಕವಾಗಿ 3000 ಗೌರವಧನವನ್ನು ನೀಡಲಾಗುವುದು. ರಾಯಚೂರು ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಗಣಿತ 01 ಹುದ್ದೆಗೆ ಬಿ.ಎಸ್ಸಿ.ಬಿಇಡ್ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳಿಗೆ ಮಾಸಿಕವಾಗಿ 3000 ಗೌರವಧನವನ್ನು ನೀಡಲಾಗುವುದು. ಇಂಗ್ಲೀಷ್ 01 ಹುದ್ದೆಗೆ ಬಿ.ಎ.,ಬಿಇಡ್ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳಿಗೆ ಮಾಸಿಕವಾಗಿ 3000 ಗೌರವಧನವನ್ನು ನೀಡಲಾಗುವುದು. ವಿಜ್ಞಾನ 01 ಹುದ್ದೆಗೆ ಬಿ.ಎಸ್ಸಿ.ಬಿಇಡ್ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳಿಗೆ ಮಾಸಿಕವಾಗಿ 3000 ಗೌರವಧನವನ್ನು ನೀಡಲಾಗುವುದು.

ಉಡಮಗಲ್ ಖಾನಾಪೂರು ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಗಣಿತ 01 ಹುದ್ದೆಗೆ ಬಿ.ಎಸ್ಸಿ.ಬಿಇಡ್ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳಿಗೆ ಮಾಸಿಕವಾಗಿ 3000 ಗೌರವಧನವನ್ನು ನೀಡಲಾಗುವುದು. ಇಂಗ್ಲೀಷ್ 01 ಹುದ್ದೆಗೆ ಬಿ.ಎ.,ಬಿಇಡ್ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳಿಗೆ ಮಾಸಿಕವಾಗಿ 3000 ಗೌರವಧನವನ್ನು ನೀಡಲಾಗುವುದು. ವಿಜ್ಞಾನ 01 ಹುದ್ದೆಗೆ ಬಿ.ಎಸ್ಸಿ.ಬಿಇಡ್ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳಿಗೆ ಮಾಸಿಕವಾಗಿ 3000 ಗೌರವಧನವನ್ನು ನೀಡಲಾಗುವುದು. ರಾಯಚೂರು ಮೆಟ್ರಿಕ್ ಪೂರ್ವ ಬಾಲಕಿಂ-ಡುರ ವಿದ್ಯಾರ್ಥಿ ನಿಲಯದಲ್ಲಿ ಗಣಿತ 01 ಹುದ್ದೆಗೆ ಬಿ.ಎಸ್ಸಿ.ಬಿಇಡ್ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳಿಗೆ ಮಾಸಿಕವಾಗಿ 3000 ಗೌರವಧನವನ್ನು ನೀಡಲಾಗುವುದು. ಇಂಗ್ಲೀಷ್ 01 ಹುದ್ದೆಗೆ ಬಿ.ಎ.,ಬಿಇಡ್ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳಿಗೆ ಮಾಸಿಕವಾಗಿ 3000 ಗೌರವಧನವನ್ನು ನೀಡಲಾಗುವುದು. ವಿಜ್ಞಾನ 01 ಹುದ್ದೆಗೆ ಬಿ.ಎಸ್ಸಿ.ಬಿಇಡ್ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳಿಗೆ ಮಾಸಿಕವಾಗಿ 3000 ಗೌರವಧನವನ್ನು ನೀಡಲಾಗುವುದು. ಆಸಕ್ತರು ಅರ್ಜಿಯನ್ನು ಅಗತ್ಯ ದಾಖಲಾತಿಗಳೊಂದಿಗೆ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಾರ್ಯಾಲಯಕ್ಕೆ ಕಚೇರಿಯ ಸಮಯದಲ್ಲಿ ಆಗಸ್ಟ್ 05ರೊಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ರಾಯಚೂರು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾ-ರಿಗಳ ಕಾರ್ಯಾಲಯಕ್ಕೆ ಕಚೇರಿಯ ಸಮಯದಲ್ಲಿ ಭೇಟಿ ನೀಡಬಹುದಾಗಿದೆ ಎಂದು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಾತಿ ಭೇದ ಮರೆತಾಗಲೇ ನಿಜವಾದ ಸಮಾನತೆ: ನಾಮದೇವಗೌಡ ಶರಣರು ಅಂಭಾ ಮಠದ ರಥ ಎಳೆದ ಮಹಿಳೆಯರು

❑ ನೈಜ್ಯ ದೆಸೆ ನ್ಯೂಸ್

**ಅರಕೇರಾ: ಮನುಷ್ಯನಿಗೆ ಅರಿವು ಬಹು ಮುಖ್ಯ. ಪ್ರತಿಯೊಬ್ಬರಿಗೂ ಒಳ್ಳೆಯದನ್ನು ಬಯಸುವವನೇ ನಿಜವಾದ ಶರಣ ಎಂದು ಅಂಭಾ ಮಠದ ನಾಮದೇವಗೌಡ ಶರಣರು ಹೇಳಿದರು. ತಾಲೂಕಿನ ಮದರಕಲ್ ಗ್ರಾಮದ ಅಂಭಾಮಠದಲ್ಲಿ ಗುರು ಪೌರ್ಣಮಿ ನಿಮಿತ್ತವಾಗಿ ಹಮ್ಮಿಕೊಂಡಿದ್ದ ಶರಣರ ಪಾದಪೂಜೆ, ಅನುಭವ ಗೋಷ್ಠಿ ಹಾಗೂ ಜಾತ್ರಾ ಮಹೋತ್ಸವದ ಕಾರ್ಯಕ್ರಮದಲ್ಲಿ ಭಕ್ತರನ್ನು ಉದ್ದೇಶಿಸಿ ಆಶೀರ್ವಚನ ನೀಡಿ ಅವರು ಮಾತನಾಡಿದರು.**

ಜಾತಿ, ಭೇದವನ್ನು ಮರೆತು ಎಲ್ಲರೂ ಸಮಾನರು ಎಂಬ ಭಾವನೆ ಬೆಳೆಸಿಕೊಂಡಾಗಲೇ ನಿಜವಾದ ಸಮಾನತೆ ಸಾಧ್ಯ. ಮನುಷ್ಯ ಮನುಷ್ಯನನ್ನು ಪ್ರೀತಿಸಬೇಕು. ದ್ವೇಷ, ಅಸೂಯೆ ತೊರೆದು ಸರ್ವರ ಏಳ್ಗೆಗಾಗಿ ಶ್ರಮಿಸಬೇಕು. ಶರಣರ ತತ್ವ, ಬಸವಾದಿ ಶರಣರ ವಚನಗಳು ಇಂದಿನ ಸಮಾಜಕ್ಕೆ ದಾರಿದೀಪವಾಗಿವೆ ಎಂದರು. ಗುರು ಪೌರ್ಣಮಿಯು ಗುರು-ಶಿಷ್ಯರ ಪವಿತ್ರ ಸಂಬಂಧದ ಸಂಕೇತ. ಗುರುವಿನ ಮಾರ್ಗದರ್ಶನವಿಲ್ಲದೆ ಜೀವನದಲ್ಲಿ ಸಾಥ-



ರ್ಕತೆ ಇಲ್ಲ. ಅರಿವಿನ ಮೂಲಕವೇ ಮನುಷ್ಯ ಪರಿಪೂರ್ಣನಾಗುತ್ತಾನೆ ಎಂದು ತಿಳಿಸಿದರು. ಬಳಿಕ ನಿವೃತ್ತ ತಹಶೀಲ್ದಾರ ವೆಂಕನಗೌಡ ಪಾಟೀಲ್ ಮಾತನಾಡಿ, ಕಂಡು ಕಣ್ಣು ತುಂಬುವ ದೊಡ್ಡ ಗೋಪುರಗಳಿಲ್ಲ, ಆಡಂಬರದ ಆಸ್ತಿಯ ವೈಭವವಿಲ್ಲ. ಆದರೂ ಭಕ್ತರ ಪಾಲಿಗೆ ಇದು ಕಾಮಧೇನು. ಚಿಕ್ಕ ಮಠವಾದರೂ 5 ಸಾವಿರಕ್ಕೂ ಮೀರಿದ ಶಿಷ್ಯ ಬಳಗವನ್ನು ತನ್ನ ಮಡಿಲಲ್ಲಿ ಬೆಳೆಸಿ ನಿಂತಿದೆ ಅಂಭಾ ಮಠ. ಇಲ್ಲಿನ ಶ್ರೀಗಳ ನುಡಿ ಸಾಮಾನ್ಯ ನುಡಿಯಲ್ಲ, ಅದು ಸಿದ್ಧವಾಣಿ. ಅವರು ನುಡಿದರೆ ನಡೆಯುತ್ತದೆ ಎಂಬುದು ಇಲ್ಲಿನ ಭಕ್ತರ ಅಚಲ ನಂಬಿಕೆ.

ಅವರ ವಾಕ್ ಸಿದ್ಧಿಯಿಂದ ನಡೆದ ಪವಾಡಗಳು ಒಂದೆರಡಲ್ಲ, ಅಂತಹ ಪವಾಡಗಳು ನಡೆದಿವೆ, ಇಂದೂ ನಡೆಯುತ್ತಿವೆ. ವಚನ ಸಾಹಿತ್ಯವನ್ನು ಕೇವಲ ಓದುವುದಲ್ಲ, ಅದನ್ನು ಉಸಿರಾಗಿಸಿಕೊಂಡು, ಚಾಚು ತಪ್ಪದೆ ನುಡಿಯುವ, ನುಡಿದಂತೆ ನಡೆಯುವ ಅಪರೂಪದ ಮಹಾನ್ ಚೇತನರು ನಮ್ಮ ಶ್ರೀಗಳು. "ನಾನು ಸೇವೆಯಲ್ಲಿ ಇದ್ದಾಗ ಅನೇಕ ಮಠ-ಮಾನ್ಯಗಳನ್ನು ನೋಡಿದ್ದೇನೆ. ಆದರೆ ಅಂಭಾ ಮಠದ ಶಕ್ತಿಯೇ ಬೇರೆ. ಇದು ಮಠವಲ್ಲ, ವಚನಗಳ ಜೀವಂತ ವಿಶ್ವವಿದ್ಯಾಲಯ. ಶ್ರೀಗಳ ಒಂದು ಮಾತು ಸಾವಿರಾರು ಜನರ ಬದುಕನ್ನು ಬೆಳಗಿದೆ. ಅವರ ನುಡಿಯಲ್ಲಿ ದೈವತ್ವವಿದೆ" ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಠಕ್ಕೆ ಆಗಮಿಸಿದ್ದ ನೂರಾರು ಭಕ್ತರು ಶರಣರ ಪಾದಪೂಜೆ ನೆರವೇರಿಸಿ, ಮಹಾಪ್ರಸಾದ ಜರುಗಿತು. ಸಂಜೆ 5 ಗಂಟೆಗೆ ಅಂಭಾ ಮಠದ ರಥೋತ್ಸವವು ಸರ್ವ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು. ನೂರಾರು ಭಕ್ತರು ಪಾಲ್ಗೊಂಡಿದ್ದ ಈ ಉತ್ಸವದಲ್ಲಿ ಮಹಿಳೆಯರು ರಥ ಎಳೆದದ್ದು ವಿಶೇಷವಾಗಿ ಗಮನ ಸೆಳೆಯಿತು. ವಾದ್ಯ ಮೇಳಗಳ ಮಂಗಳ ಧ್ವನಿ ಉತ್ಸವಕ್ಕೆ ಮತ್ತಷ್ಟು ಮೆರಗು ನೀಡಿತು.

ಸದಾಶಿವ ತಾತ ಮುಂಡರಗಿ, ಆರ್ ಡಿಸಿ ಬ್ಯಾಂಕ್ ನಿರ್ದೇಶಕ ಎ.ರಾಜಶೇಖರ ನಾಯಕ, ಬಿಜೆಪಿ ಮುಖಂಡ ಕೆ.ಅನಂತರಾಜ ನಾಯಕ, ರಾಮಣ್ಣ ಇರಬಿಗೇರಾ, ವಿ.ಎಂ.ಮೇಟಿ, ರಾಮನಗೌಡ ಪೋ,ಪಾ, ಮಲ್ಲಿಕಾರ್ಜುನ ಪಾಟೀಲ್, ವೀರಣ್ಣ ಪಾಣಿ ಸಾಹುಕಾರ್, ಬಸ್ಸಣ್ಣ ರಾಮುಲು, ಮಹಾಂತಯ್ಯ ಸ್ವಾಮಿ, ಶಂಕರಗೌಡ, ಸಾಬಣ್ಣ ಹೂಗಾರ, ಹೇಮನಗೌಡ, ಅಯ್ಯನಗೌಡ, ರಾಮಣ್ಣ ಉದ್ದಾರ, ಗರುಡ ನಾಯಕ, ಶಿವಪ್ಪ ಪಲಕನಮರಡಿ, ಚನ್ನಬಸವ ನಾಯಕ, ಅಮರೇಶ ಪೋ.ಪಾ, ಕ-ರಿಯಪ್ಪ, ಹನುಮಂತ ದೇಸಾಯಿ, ದೇವಣ್ಣಗೌಡ, ಹನುಮಂತ ಬಡಿಗೇರ, ಶಿವರಾಜ ಪಾಟೀಲ್, ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರು, ಭಕ್ತ ಮಂಡಳಿಯ ಪದಾಧಿಕಾರಿಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಪೋಸ್ಟ್–ಡಾಕ್ಟರಲ್ ರಿಸರ್ಚ್ (Post-Doctoral Research)

ಪೋಸ್ಟ್–ಡಾಕ್ಟರಲ್ ರಿಸರ್ಚ್ (Post-Doctoral Research ಅಥವಾ Postdoc) ಎಂದರೆ ಪಿಎಚ್‌ಡಿ (Ph.D.) ಪದವಿ ಪೂರ್ಣಗೊಳಿಸಿದ ನಂತರ ಕೈಗೊಳ್ಳುವ ಉನ್ನತ ಮಟ್ಟದ ಸಂಶೋಧನಾ ಕಾರ್ಯಕ್ರಮ. ಇದು ಹೊಸ ಪದವಿ ಕೋರ್ಸ್ ಅಲ್ಲ; ಬದಲಾಗಿ ಸ್ವತಂತ್ರ ಸಂಶೋಧಕರಾಗಿ ಪರಿಣತಿಯನ್ನು ವೃದ್ಧಿಸಿಕೊಳ್ಳಲು, ಹೊಸ ಆವಿಷ್ಕಾರಗಳನ್ನು ಮಾಡಲು ಮತ್ತು ಶೈಕ್ಷಣಿಕ ಅಥವಾ ವೈಜ್ಞಾನಿಕ ಕ್ಷೇತ್ರದಲ್ಲಿ ಉನ್ನತ ವೃತ್ತಿಜೀವನ ರೂಪಿಸಿಕೊಳ್ಳಲು ನೆರವಾಗುವ ಸಂಶೋಧನಾ ಹಂತವಾಗಿದೆ.

**ಪ್ರಮುಖ ಉದ್ದೇಶಗಳು**

– ನಿರ್ದಿಷ್ಟ ವಿಷಯದಲ್ಲಿ ಆಳವಾದ ಸಂಶೋಧನೆ ನಡೆಸುವುದು.
– ಹೊಸ ತಂತ್ರಜ್ಞಾನ, ಸಿದ್ಧಾಂತ ಅಥವಾ ಸಂಶೋಧನಾ ವಿಧಾನಗಳನ್ನು ಅಭಿವೃದ್ಧಿಪಡಿಸುವುದು.
– ಅಂತರರಾಷ್ಟ್ರೀಯ ಮಟ್ಟದ ಸಂಶೋಧನಾ ಲೇಖನಗಳನ್ನು ಪ್ರಕಟಿಸುವುದು.
– ವಿಶ್ವವಿದ್ಯಾಲಯ, ಸಂಶೋಧನಾ ಸಂಸ್ಥೆ ಅಥವಾ ಕೈಗಾರಿಕೆಗಳೊಂದಿಗೆ ಸಹಯೋಗದಲ್ಲಿ ಕೆಲಸ ಮಾಡುವುದು.
– ಭವಿಷ್ಯದಲ್ಲಿ ಪ್ರಾಧ್ಯಾಪಕ, ವಿಜ್ಞಾನಿ ಅಥವಾ ಪ್ರಮುಖ ಸಂಶೋಧಕರಾಗಿ ಬೆಳೆಯಲು ಅನುಭವ ಗಳಿಸುವುದು.

**ಅರ್ಹತೆ (Eligibility)**

– ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪಿಎಚ್‌ಡಿ (Ph.D.) ಪದವಿ ಪಡೆದಿರಬೇಕು.
– ಉತ್ತಮ ಸಂಶೋಧನಾ ಹಿನ್ನೆಲೆ ಹಾಗೂ ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಜರ್ನಲ್‌ಗಳಲ್ಲಿ ಪ್ರಕಟಿತ ಸಂಶೋಧನಾ ಲೇಖನಗಳಿರುವುದು ಅನುಕೂಲ.
– ಸ್ಪಷ್ಟ ಮತ್ತು ಹೊಸತನ ಹೊಂದಿರುವ Research Proposal ಸಲ್ಲಿಸಬೇಕು.
– ಕೆಲವು ಸಂಸ್ಥೆಗಳು ಸಂದರ್ಶನ ಅಥವಾ ಪ್ರಸ್ತುತಿಕರಣ (Presentation) ನಡೆಸಬಹುದು.

**ಅವಧಿ (Duration)**

– ಸಾಮಾನ್ಯವಾಗಿ 1 ರಿಂದ 3 ವರ್ಷಗಳು.
– ಕೆಲವು ಯೋಜನೆಗಳಲ್ಲಿ 4 ಅಥವಾ 5 ವರ್ಷಗಳವರೆಗೆ ವಿಸ್ತರಣೆ ಸಾಧ್ಯ.

**ಪ್ರಮುಖ ಸಂಶೋಧನಾ ಕ್ಷೇತ್ರಗಳು**

– ಕೃಷಿ ವಿಜ್ಞಾನ
– ಜೀವ ವಿಜ್ಞಾನ ಮತ್ತು ಜೈವಿಕ ತಂತ್ರಜ್ಞಾನ
– ವೈದ್ಯಕೀಯ ಮತ್ತು ಆರೋಗ್ಯ ವಿಜ್ಞಾನ
– ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ
– ಕಂಪ್ಯೂಟರ್ ಸೈನ್ಸ್ ಮತ್ತು ಕೃತಕ ಬುದ್ಧಿಮತ್ತೆ (ಂಖ)
– ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತ
– ಸಮಾಜ ವಿಜ್ಞಾನ ಮತ್ತು ಮಾನವಿಕ ಶಾಸ್ತ್ರ
– ವಾಣಿಜ್ಯ, ಅರ್ಥಶಾಸ್ತ್ರ ಮತ್ತು ನಿರ್ವಹಣೆ
– ಪರಿಸರ ವಿಜ್ಞಾನ ಮತ್ತು ಹವಾಮಾನ ಅಧ್ಯಯನ

**ಫೆಲೋಶಿಪ್ ಮತ್ತು ಧನಸಹಾಯ**

ಪೋಸ್ಟ್–ಡಾಕ್ಟರಲ್ ಸಂಶೋಧಕರಿಗೆ ವಿವಿಧ ಸಂಸ್ಥೆಗಳು ಫೆಲೋಶಿಪ್ ಹಾಗೂ ಸಂಶೋಧನಾ ಅನುದಾನವನ್ನು ನೀಡುತ್ತವೆ.

ಉದಾಹರಣೆಗೆ:

– ಯುಜಿಸಿ (UGC) ಫೆಲೋಶಿಪ್‌ಗಳು
– ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ (DST)
– ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ (CSIR)
– ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ICMR)
– ಜೈವಿಕ ತಂತ್ರಜ್ಞಾನ ಇಲಾಖೆ (DBT)
– ಖಇಖಃ ಹಾಗೂ ಇತರೆ ಸರ್ಕಾರಿ ಮತ್ತು ಖಾಸಗಿ ಸಂಶೋಧನಾ ಅನುದಾನ ಯೋಜನೆಗಳು

ಫೆಲೋಶಿಪ್‌ನಲ್ಲಿ ಸಾಮಾನ್ಯವಾಗಿ ಮಾಸಿಕ ವೇತನ, ಸಂಶೋಧನಾ ವೆಚ್ಚ, ಪ್ರಯಾಣ ಭತ್ಯೆ ಹಾಗೂ ಇತರೆ ಸೌಲಭ್ಯಗಳು ಒಳಗೊಂಡಿರಬಹುದು.

**ಪ್ರಮುಖ ಸಂಸ್ಥೆಗಳು**

ಭಾರತದಲ್ಲಿ ಪೋಸ್ಟ್–ಡಾಕ್ಟರಲ್ ಅವಕಾಶಗಳನ್ನು ನೀಡುವ ಪ್ರಮುಖ ಸಂಸ್ಥೆಗಳು:

– ಭಾರತೀಯ ವಿಜ್ಞಾನ ಸಂಸ್ಥೆ (IISc), ಬೆಂಗಳೂರು
– ಭಾರತೀಯ ತಂತ್ರಜ್ಞಾನ ಸಂಸ್ಥೆಗಳು (IITs)
– ಭಾರತೀಯ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಗಳು (IISERs)
– ರಾಷ್ಟ್ರೀಯ ಮಹತ್ವದ ವಿಶ್ವವಿದ್ಯಾಲಯಗಳು
– ವಿವಿಧ ಕೇಂದ್ರ ಮತ್ತು ರಾಜ್ಯ ವಿಶ್ವವಿದ್ಯಾಲಯಗಳು
- CSIR, DRDO, ISRO, ICAR, ICMR ಹಾಗೂ ಇತರೆ ರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳು

**ಪ್ರವೇಶ ಪ್ರಕ್ರಿಯೆ**

1. ಸೂಕ್ತ ಸಂಶೋಧನಾ ಸಂಸ್ಥೆ ಅಥವಾ ಮಾರ್ಗದರ್ಶಕರನ್ನು ಆಯ್ಕೆ ಮಾಡುವುದು.
2. Research Proposal ಸಿದ್ಧಪಡಿಸುವುದು.
3. ಅರ್ಜಿ ಮತ್ತು ಅಗತ್ಯ ದಾಖಲೆಗಳನ್ನು ಸಲ್ಲಿಸುವುದು.
4. ಸಂದರ್ಶನ ಅಥವಾ ಸಂಶೋಧನಾ ಚರ್ಚೆಯಲ್ಲಿ ಭಾಗವಹಿಸುವುದು.
5. ಆಯ್ಕೆಯಾದ ನಂತರ ಸಂಶೋಧನಾ ಕಾರ್ಯ ಪ್ರಾರಂಭಿಸುವುದು.

**ಅಗತ್ಯ ಕೌಶಲ್ಯಗಳು**

– ವಿಮರ್ಶಾತ್ಮಕ ಚಿಂತನೆ (Critical Thinking)
– ಸಂಶೋಧನಾ ವಿಧಾನಗಳ ಜ್ಞಾನ
– ವೈಜ್ಞಾನಿಕ ಬರವಣಿಗೆ (Scientific Writing)
– ಡೇಟಾ ವಿಶ್ಲೇಷಣೆ
– ಸಮಸ್ಯೆ ಪರಿಹಾರ ಕೌಶಲ್ಯ
– ತಂಡದೊಂದಿಗೆ ಕಾರ್ಯನಿರ್ವಹಿಸುವ ಸಾಮರ್ಥ್ಯ
– ಉತ್ತಮ ಸಂವಹನ ಕೌಶಲ್ಯ

**ಉದ್ಯೋಗಾವಕಾಶಗಳು**

– ವಿಶ್ವವಿದ್ಯಾಲಯಗಳಲ್ಲಿ ಸಹಾಯಕ ಪ್ರಾಧ್ಯಾಪಕ (Assistant Professor)
– ಹಿರಿಯ ವಿಜ್ಞಾನಿ (Senior Scientist)
– ಸಂಶೋಧನಾ ವಿಜ್ಞಾನಿ (Research Scientist)
– ಕೈಗಾರಿಕಾ ಸಂಶೋಧನಾ ಮತ್ತು ಅಭಿವೃದ್ಧಿ (R&D) ವಿಭಾಗ
– ಸರ್ಕಾರಿ ಸಂಶೋಧನಾ ಸಂಸ್ಥೆಗಳು
– ಅಂತರರಾಷ್ಟ್ರೀಯ ಸಂಶೋಧನಾ ಕೇಂದ್ರಗಳು
– ನೀತಿ ಸಂಶೋಧನೆ ಮತ್ತು ಸಲಹಾ ಸಂಸ್ಥೆಗಳು

**ಪೋಸ್ಟ್–ಡಾಕ್ಟರಲ್ ರಿಸರ್ಚ್‌ನ ಪ್ರಯೋಜನಗಳು**

– ಜಾಗತಿಕ ಮಟ್ಟದ ಸಂಶೋಧನಾ ಅನುಭವ
– ಅಂತರರಾಷ್ಟ್ರೀಯ ತಜ್ಞರೊಂದಿಗೆ ಕೆಲಸ ಮಾಡುವ ಅವಕಾಶ
– ಉತ್ತಮ ಸಂಶೋಧನಾ ಪ್ರಕಟಣೆಗಳು ಮತ್ತು ಪೇಟೆಂಟ್‌ಗಳ ಸಾಧ್ಯತೆ
– ಶೈಕ್ಷಣಿಕ ಹಾಗೂ ಕೈಗಾರಿಕಾ ಕ್ಷೇತ್ರಗಳಲ್ಲಿ ಉತ್ತಮ ವೃತ್ತಿ ಅವಕಾಶಗಳು – ನಾಯಕತ್ವ ಮತ್ತು ಸ್ವತಂತ್ರ ಸಂಶೋಧನಾ ಸಾಮರ್ಥ್ಯದ ಅಭಿವೃದ್ಧಿ

**ಸಾರಾಂಶ**

ಪೋಸ್ಟ್–ಡಾಕ್ಟರಲ್ ರಿಸರ್ಚ್ ಎನ್ನುವುದು ಪಿಎಚ್‌ಡಿ ನಂತರದ ಅತ್ಯುನ್ನತ ಸಂಶೋಧನಾ ಹಂತವಾಗಿದ್ದು, ಜ್ಞಾನ ಸೃಷ್ಟಿ, ಹೊಸ ಆವಿಷ್ಕಾರಗಳು ಮತ್ತು ಉನ್ನತ ವೃತ್ತಿಜೀವನಕ್ಕೆ ಭದ್ರ ನೆಲೆ ಒದಗಿಸುತ್ತದೆ. ಸಂಶೋಧನೆಯಲ್ಲಿ ಆಸಕ್ತಿ ಹೊಂದಿರುವವರಿಗೆ ಇದು ಅತ್ಯಂತ ಮೌಲ್ಯಯುತ ಅವಕಾಶವಾಗಿದೆ.

# ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಿ ವಿಶೇಷ ಗಮನಹರಿಸಲು ಸೂಚನೆ



ನೈಜ್ಯ ದೆಸೆ ನ್ಯೂಸ್

**ರಾಯಚೂರು ಜುಲೈ 29 (ಕರ್ನಾಟಕ ವಾರ್ತೆ): ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶ ಸುಧಾರಿಸಿ, ಜಿಲ್ಲೆಯನ್ನು ರಾಜ್ಯ ಫಲಿತಾಂಶದ ಅಗ್ರಸ್ಥಾನಕ್ಕೆ ತರುವಂತೆ ನೋಡಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳು ತಮ್ಮ ಜವಾಬ್ದಾರಿ ಅರಿತು ಶ್ರಮಿಸಬೇಕೆಂದು ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್. ಅವರು ಸೂಚಿಸಿದರು.**

ಜುಲೈ 28ರ ಮಂಗಳವಾರದಂದು ನಗರದ ನೂತನ ಜಿಲ್ಲಾಧಿಕಾ–ರಿಗಳ ಕಚೇರಿಯ ಸಭಾಂಗಣದಲ್ಲಿ ಶೈಕ್ಷಣಿಕ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶ ಉತ್ತಮಗೊಳಿಸಲು ಕೈಗೊಳ್ಳಬಹುದಾದ ಕ್ರಮ ಹಾಗೂ ರೂಪಿಸಿ ಅನುಷ್ಠಾನಗೊಳಿಸಬಹುದಾದ ಕಾರ್ಯಕ್ರಮಗಳ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಶಿಕ್ಷಕರು ಫಲಿತಾಂಶ ಹೆಚ್ಚಿಸಲು ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಿ ವಿಶೇಷ ಗಮನಹರಿಸಿದಾಗ ಸಹಜವಾಗಿ ಉತ್ತಮ ಫಲಿತಾಂಶ ದೊರೆಯಲಿದೆ. ಮಕ್ಕಳ ಶೈಕ್ಷಣಿಕ ಕೌಟುಂಬಿಕ ವಾತಾವರಣ ಸರಿಯಾಗಿಲ್ಲ ಎನ್ನುವಂತಹ ಬಾಲಿಶ ಕಾರಣಗಳನ್ನು ಹೇಳದೇ ಮಕ್ಕಳ ಕಲಿಕೆಗೆ ಪೂರಕ ವಾತಾವರಣ ನಿರ್ಮಿಸುವ ಹೊಣೆಗಾರಿಕೆ ಶಿಕ್ಷಕರ ಮೇಲಿದೆ.

ಈ ಕುರಿತು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಸೂಕ್ತ ಕ್ರಮವಹಿಸಬೇಕೆಂದು ಜಿಲ್ಲಾಧಿಕಾರಿಗಳು ಸಂಬಂಧಿಸಿದ ಅಧಿಕಾ–ರಿಗಳಿಗೆ ನಿರ್ದೇಶನ ನೀಡಿದರು. ಶಿಕ್ಷಕರು ಕೂಡ ಮಕ್ಕಳ ಮಾನಸಿಕ ಸ್ಥಿತಿ–ಗತಿ, ಕಲಿಕೆಯಲ್ಲಿ ಅವರಿಗಿರುವ ಆಸಕ್ತಿ ಮುಂತಾದವುಗಳನ್ನು ಸೂಕ್ಷ್ಮ ಕ್ರಮವಾಗಿ ಗಮನಿಸಿ, ಅವರಿಗೆ ಅರ್ಥವಾಗುವ ರೀತಿಯಲ್ಲಿ ಬೋಧಿಸುವ ಅಗತ್ಯವಿದೆ. ಬೋಧನೆಗೆ ಹೊರಡುವ ಶಿಕ್ಷಕರು ಪೂರ್ವ ತಯಾ–ರಿಯೊಂದಿಗೆ ತರಗತಿಗೆ ಹೋಗಬೇಕು.

ಅದಕ್ಕೆ ಪೂರಕವಾಗಿ ಶಿಕ್ಷಕರು ತಮ್ಮ ಚಿಂತನೆ, ಆಲೋಚನೆ ಮತ್ತು ಬೋಧನಾ ಕ್ರಮಗಳಲ್ಲಿ ಬದಲಾವಣೆ ತಂದುಕೊಂಡು ತರಗತಿ ಆಕರ್ಷಕವಾಗಿರುವಂತೆ ನೋಡಿಕೊಳ್ಳಬೇಕೆಂದು ಸಂಬಂಧಿಸಿದ ಇಲಾಖೆಯ ಅಧಿಕಾ–ರಿಗಳಿಗೆ ಜಿಲ್ಲಾಧಿಕಾರಿಗಳು ಸಲಹೆ ನೀಡಿದರು. ಜಿಲ್ಲೆಯ ಎಲ್ಲಾ ತಾಲೂಕಿನ ಮಧ್ಯಾಹ್ನ ಉಪಹಾರ ಯೋಜನೆ, ಬಜೆಟ್ ಸಮಸ್ಯೆ, ಹಾಲಿನ ಕೊರತೆ ಹಾಗೂ ಇತರೆ ಖರ್ಚು ವೆಚ್ಚಗಳ ಕುರಿತು ಜಿಲ್ಲಾಧಿಕಾರಿಗಳು ಮಾಹಿತಿ ಪಡೆದರು. ನಂತರ ಜಿಲ್ಲೆಯ ಎಲ್ಲಾ ತಾಲೂಕಿನ ಸಿ.ಆರ್.ಪಿ, ಬಿ.ಆರ್.ಪಿ, ಬಿ.ಆರ್.ಸಿ ಹಾಗೂ ಸಹಾಯಕ ನಿರ್ದೇಶಕರು ಕಾಲಕಾಲಕ್ಕೆ ಶಾಲೆಗಳಿಗೆ ಭೇಟಿ ನೀಡಿ ತಪಾಸಣೆ ಮಾಡಬೇಕು. ಅಗಸ್ಟ್ 17ರಂದು ನಡೆಯುವ ಸಭೆಗೆ ಎಲ್ಲಾ ಅಧಿಕಾರಿಗಳು ಕಡ್ಡಾಯವಾಗಿ ಹಾಜರಾಗಬೇಕು. ಅಲ್ಲದೆ ಕೆಲವು ಶಾಲೆಗಳಿಗೆ ಬಸ್ ಸೌಕರ್ಯ ಇಲ್ಲದೇ ಇರುವುದರಿಂದ ವಿದ್ಯಾರ್ಥಿಗಳು ನಡೆದುಕೊಂಡು ಬರುತ್ತಿರುವ ಕುರಿತು ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ಹರಿಬಿಡಲಾಗಿದೆ. ಈ ಬಗ್ಗೆ ಸೂಕ್ತ ಕ್ರಮವಹಿಸಿ, ವಿದ್ಯಾರ್ಥಿಗಳಿಗೆ ಬಸ್ ವ್ಯವಸ್ಥೆ ಮಾಡುವಂತೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಕಳೆದ 2025–26ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ವಿಶ್ಲೇಷಣೆ ಮಾಡಿ, ರಾಯಚೂರು ಜಿಲ್ಲೆಯಲ್ಲಿ ಕಳೆದ ವರ್ಷ 28,076 ಸಾವಿರ ಮಕ್ಕಳು ಪರೀಕ್ಷೆಗೆ ಹಾಜರಾಗಿದ್ದು, ಅದರಲ್ಲಿ 26,205 ಉತ್ತೀರ್ಣರಾಗುವ ಮೂಲಕ ರಾಯಚೂರು ಜಿಲ್ಲೆಯು ಶೇ.94.41 ಸ್ಥಾನ ಪಡೆದಿರುತ್ತದೆ.

134 ಶಾಲೆಗಳು ಶೇ.100 ಫಲಿತಾಂಶ ಪಡೆದದಿದ್ದು, ಗ್ರಾಮೀಣ ವಿಭಾಗದಲ್ಲಿ 8,496 ಒಟ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಅದರಲ್ಲಿ ಗಂಡು 3,732 (ಶೇ.96.65) ಹೆಣ್ಣು–4,129 (ಶೇ.94.32) ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 3 ರಿಂದ 7 ದಿನದ ಶಾಲೆಯಿಂದ ಹೊರಗುಳಿದ ಮಕ್ಕಳ ಮಾಹಿತಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶನಕರಾದ ಮಲ್ಲಿಕಾರ್ಜುನ ಅವರು ಸಭೆಗೆ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾ–ರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲೆಯ ವಿವಿಧ ತಾಲೂಕಿನ ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ ಅಧಿಕಾರಿಗಳು, ಎಸ್.ಎಸ್.ಕೆ ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾ–ರಿಗಳು, ಎಸ್.ಎಸ್.ಎಲ್.ಸಿ ಜಿಲ್ಲಾ ನೋಡಲ್ ಅಧಿಕಾರಿಗಳು, ದೈಹಿಕ ಜಿಲ್ಲಾ ಶಿಕ್ಷಣಾಧಿಕಾರಿಗಳು ಸೇ–ರಿದಂತೆ ವಿವಿಧ ಇಲಾಖೆಯ ಅಧಿಕಾ–ರಿಗಳು, ಸಿಬ್ಬಂದಿಗಳು ಸಭೆಯಲ್ಲಿ ಇದ್ದರು.

# ಕಿಶೋರಿ ಕೇಂದ್ರದಲ್ಲಿ ಆರೋಗ್ಯ ಜಾಗೃತಿ:

## ಹೆಣ್ಣು ಮಕ್ಕಳ ರಕ್ಷಣೆ ಸೇರಿದಂತೆ ಬಾಲ್ಯವಿವಾಹ ತಡೆಗಾಗಿ 1098 ಸಹಾಯವಾಣಿ ಸದುಪಯೋಗ ಪಡೆಯಿರಿ.

ನೈಜ್ಯ ದೆಸೆ ನ್ಯೂಸ್

**ಸಾಮಾಜಿಕ ವ್ಯವಸ್ಥೆಯನ್ನು ದುರ್ಬಲವಾಗಿಸುವ ಬಾಲ್ಯ ವಿವಾಹವನ್ನು ತಡೆಯಲು ಕೀಶೋರಿ ಕೇಂದ್ರಗಳು ಪ್ರಮುಖ ಪರಿವರ್ತನಾ ಕೇಂದ್ರಗಳಾಗಿದ್ದು, ಜಿಲ್ಲೆಯ ಪ್ರತಿ ಮಗುವು ಯಾವುದೇ ಗಂಭೀರ ಸಮಸ್ಯೆಗೆ ಒಳಗಾದಲ್ಲಿ 1098 ಮಕ್ಕಳ ಸಹಾಯವಾಣಿಯ ಸದುಪಯೋಗ ಪಡೆದುಕೊಳ್ಳಲು ಉಪಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ ಮನವಿ ಮಾಡಿದರು.**

ರಾಯಚೂರು ನಗರದ ಸ್ಟೇಷನ್ ರಸ್ತೆಯ ಬಾಲಕಿಯರ ಸರಕಾರಿ ಪದವಿಪೂರ್ವ ಕಾಲೇಜು ಆವರಣದಲ್ಲಿಯ ಕಿಶೋರಿ ಕೇಂದ್ರದಲ್ಲಿ ಬಾಲ್ಯವಿವಾಹ ಕುರಿತು, ವಿಧ್ಯಾರ್ಥಿನಿಯರಿಗೆ ಜಾಗೃತಿ ನೀಡಿ ಮಾತನಾಡುತ್ತಾ, ಸಾಮಾಜಿ–ಕ ಅನಿಷ್ಠ ಪದ್ದತಿಯಾಗಿರುವ ಬಾಲ್ಯವಿವಾಹ ಹೆಣ್ಣು ಮಗುವಿನ ಕನಸನ್ನು ಚೂಟಿದಂತೆ, ಮದುವೆ ವಯಸ್ಸು 18 ವರ್ಷ ಕೇವಲ ಕಾನೂನು ಮಾತ್ರವಲ್ಲ, ದೈಹಿಕ, ಮಾನಸಿಕ, ಶಾರೀರಿಕ ಬದಲಾವಣೆಯು ಈ ವಯಸ್ಸಿನಲ್ಲಿ ಆಗುವ ಮೂಲಕ ತಾಯ್ತನವನ್ನು ನಿರ್ವಹಿಸಲು ಸೂಕ್ತ ವಯಸ್ಸಾಗಿದೆ. ಅಲ್ಲದೆ ಹೆಣ್ಣು ಮಕ್ಕಳು ಏನಾದರೂ ಸಮಸ್ಯಗೆ ಸಿಲುಕಿಕೊಂಡಾಗ,




ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದಾಗ, ಶೋಷಣೆಗೆ ಒಳಗಾದ, ಹಾಗೆಯೇ 18 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಮದುವೆ ಮಾಡಿಸುವ ಸಿದ್ದತೆ ಅಥವಾ ಅಧೀಕೃತ ಮಾಹಿತಿ ದೊರೆತಲ್ಲಿ ಮದುವೆಯನ್ನು ತಡೆಯಲು ಇದು ಸಹಕಾರಿಯಾಗುತ್ತದೆ. ಇದು ಉಚಿತವಾಗಿ ಕರೆಯಾಗಿದ್ದು, ಸರಕಾರದಿಂದ ನೇರ ನಿಗಾವಣೆಯಲ್ಲಿದ್ದು, ಕರೆ ಮಾಡಿದವರ ಹೆಸರನ್ನು ಎಲ್ಲಿ ಬಹಿರಂಗಪಡಿಸದೆ ಗೌಪ್ಯವಾಗಿ ಇಡಲಾಗುವವುದು ಎಂದು ತಿಳಿಸಿದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜ ಕೆ, ಹಾಗೂ ಆರ್‌ಕೆಎಸ್‌ಕೆ ಆಪ್ತ ಸಮಾಲೊಚಕರು ಸಿದ್ದಮ್ಮ ಜಂ–ಟಿಯಾಗಿ ಜಾಗೃತಿ ನೀಡುತ್ತಾ, ಮಾಸಿಕ ಋತುಚಕ್ರವು ಹೆಣ್ಣು ಮಗುವಿನಲ್ಲಾಗುವ ನಿಸರ್ಗದತ್ತ ಪ್ರಕ್ರಿಯೆಯಾಗಿದೆ, ಋತುಚಕ್ರ ಸಮಯದಲ್ಲಿ ಕೆಲವರಿಗೆ ಕಂಡುಬರುವ ನೋವನ್ನು ಶಮನ ಮಾಡಲು ಬೀಸಿ ನೀರನ್ನು ಬಾಟಲಿಯಲ್ಲಿ ಹಾಕಿ ನಿಧಾನವಾಗಿ ಹೊಟ್ಟೆಯ ಮೇಲ್ಭಾಗದಲ್ಲಿ ಉರುಳಾಡಿಕೊಳ್ಳಬೇಕು, ಪೌಷ್ಟಿಕಾಹಾರ ಸೇವೆಸಬೇಕು, ಯೋಗ, ಧ್ಯಾನ ಮಾಡಬೇಕು ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ ಉಪನ್ಯಾಸ ನೀಡಿ, ಮೊಬೈಲ್‌ಗಳ ಮೂಲಕ ಸಾಮಾಜಿ–ಕ ಜಾಲತಾಣಗಳಲ್ಲಿ ಅಪರಿಚಿತ ವ್ಯಕ್ತಿಗಳು ಚಾಟ್ ಮಾಡಿದಾಗ ಸ್ಪಂದಿಸಬೇಡಿ, ಅಪ–ರಿಚಿತರ ಅನಗತ್ಯ ರೀಲ್ಸ್‌ಗಳಿಗೆ ಲೈಕ್ ಮಾಡುವ, ಪ್ರತಿಕ್ರಿಯಿಸುವ, ಮೊಬೈಲ್ ಸಂಖ್ಯೆ ನೀಡುವ ತಪ್ಪು ನಿರ್ಧಾರ ತೆಗೆದುಕೊಳ್ಳಬಾರದು, ಈ ಕುರಿತು ಇತರರಿಗೂ ಮಾಹಿತಿ ಹಂಚಿಕೊಳ್ಳಿ ಎಂದು ವಿನಂತಿಸಿದರು. ಇದೆ ಸಂದರ್ಭದಲ್ಲಿ ಹೆಪಟೈಟಸ್–ಬಿ ಕುರಿತು ಜಾಗೃತಿ ನೀಡಲಾಯಿತು. ಈ ಸಂದರ್ಭದಲ್ಲಿ ನ್ಯಾಯವಾದಿಗಳಾದ ಸುವರ್ಣ, ಬಾಲಗಾನಿ ತಾರಾ ಸೇ–ರಿದಂತೆ ವಿಧ್ಯಾರ್ಥಿನಿಯರು ಉಪಸ್ಥಿತರಿದ್ದರು.

# ತಮಿಳುನಾಡಿಗೆ 4.50 ಟಿಎಂಸಿ ನೀರು ಹರಿಸುವ ಆದೇಶ ಸರಿಯಲ್ಲ: ಸಚಿವ ಎಂ.ಬಿ.ಪಾಟೀಲ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ರಾಜ್ಯದ ಕಾವೇರಿ ಜಲಾನಯನ ಪ್ರದೇಶದಲ್ಲಿ ಈ ವರ್ಷ ಒಳ್ಳೆಯ ಮಳೆಯೇ ಆಗಿಲ್ಲ. ಹೀಗಾಗಿ ಈ ವ್ಯಾಪ್ತಿಯ ಜಲಾಶಯಗಳಲ್ಲಿ ನೀರಿಲ್ಲ. ಹೀಗಿರುವಾಗ ಕಾವೇರಿ ನೀರು ನಿಯಂತ್ರಣ ಸಮಿತಿಯು ತಮಿಳುನಾಡಿಗೆ 4.50 ಟಿಎಂಸಿ ನೀರು ಹರಿಸುವಂತೆ ರಾಜ್ಯಕ್ಕೆ ಹೇಳಿರುವುದು ಸರಿಯಲ್ಲ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.**

ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚೆನ್ನಾಗಿ ಮಳೆಯಾದರೆ



ಕಾವೇರಿ ನೀರಿನ ಹಂಚಿಕೆಯಲ್ಲಿ ಯಾವ ಸಮಸ್ಯೆಯೂ ಬರುವುದಿಲ್ಲ. ಅಂತಹ ವರ್ಷಗಳಲ್ಲಿ ನಾವು ನಿಗದಿತ 177 ಟಿಎಂಸಿಗಿಂತ ಹೆಚ್ಚು ನೀರನ್ನೇ ತಮಿಳುನಾಡಿಗೆ ಹ–ರಿಸುತ್ತಿದ್ದೇವೆ ಎಂದರು. ಬರಗಾಲ ಬಂದಾಗ ಯಾವ ಸಂಕಷ್ಟ ಸೂತ್ರವೂ ಇಲ್ಲ. ಇದಕ್ಕೆಲ್ಲ ಮೇಕೆದಾಟು ಜಲಾಶಯ ನಿರ್ಮಾಣವೇ ಉತ್ತರ ಎಂದು ಅವರು ಪ್ರತಿಪಾದಿಸಿದ್ದಾರೆ.

ಕಾವೇರಿ ನೀರು ಹಂಚಿಕೆಯ ಅಂತಿಮ ತೀರ್ಪಿನಲ್ಲಿ ನಮಗೆ ಹೆಚ್ಚುವರಿಯಾಗಿ ಸಿಕ್ಕಿದ 14 ಟಿಎಂಸಿ ನೀರೂ ಸೇರಿ ಒಟ್ಟು 65 ಟಿಎಂಸಿ ನೀರನ್ನು ನಾವು ಸಂಗ್ರಹಿಸಿ ಇಟ್ಟುಕೊಳ್ಳಲು ವ್ಯವಸ್ಥೆ ಬೇಕಾಗಿದೆ. ಹೀಗಾಗಿ ನಾನು ಹಿಂದೆ ಜಲ ಸಂಪನ್ಮೂಲ ಸಚಿವನಾಗಿದ್ದಾಗಲೇ ಮೇಕೆದಾಟು ಯೋಜನೆಯ ಪರಿಕಲ್ಪನೆ ಬಂತು. ಇದರಿಂದ ತಮಿಳುನಾಡಿಗೂ ಪ್ರಯೋಜನವಿದೆ. ಆದ–'ರೆ ಅಲ್ಲಿಯ ಆಂತರಿಕ ರಾಜಕಾರಣವು ಇದಕ್ಕೆ ಆಸ್ಪದ ಕೊಡುತ್ತಿಲ್ಲ. ಇದರ ಬದಲು ಅವರು ಮೇಕೆದಾಟು ಜಲಾಶಯದಿಂದ ತಮಿಳುನಾಡಿಗೂ ಲಾಭವಿದೆ ಎನ್ನುವ ಸರಳ ಸತ್ಯವನ್ನು ಒಪ್ಪಿಕೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಹಿಂದೆ ಜಲ ಸಂಪನ್ಮೂಲ ಖಾತೆಯನ್ನೂ ನಿರ್ವಹಿಸಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಈಗಿನ ಜಲ ಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಸೇರಿ, ಈಗಿನ ಬಿಕ್ಕಟ್ಟಿಗೆ ಪರಿಹಾರವನ್ನು ಹುಡುಕಲಿದ್ದಾರೆ. ಕೇಂದ್ರ ಸರಕಾರದ ಸಮಿತಿ ಕೂಡ ಈಗಿನ ನೀರು ಸಂಗ್ರಹಣೆಗೆ ಸಂಬಂಧಿಸಿದ ವಿಡಿಯೋ ಮತ್ತು ಅಂಕಿಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಬೇಕು ಎಂದು ಪಾಟೀಲ ನುಡಿದಿದ್ದಾರೆ.

# ಗುರುಪೂರ್ಣಿಮೆ ಮಹೋತ್ಸವದಲ್ಲಿ ಶೈಕ್ಷಣಿಕ ಸೇವೆಗೆ ಚಾಲನೆ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ನೆರವು ನೀಡುವ ಯೋಜನೆ ಆರಂಭ: ಸಾಯಿ ಕಿರಣ ಆದೋನಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಗುರುಪೂರ್ಣಿಮೆಯ ಅಂಗವಾಗಿ ನಗರದ ಓಂ ಸಾಯಿ ಧ್ಯಾನ ಮಂದಿರದಲ್ಲಿ ಬುಧವಾರ ಭಕ್ತಿಭಾವದಿಂದ ಗುರುಪೂರ್ಣಿಮಾ ಮಹೋತ್ಸವ ಆಚರಿಸಲಾಯಿತು. ಬೆಳಗ್ಗೆಯಿಂದಲೇ ಸಾವಿರಾರು ಭಕ್ತರು ಶ್ರೀ ಶಿರಡಿ ಸಾಯಿಬಾಬಾರ ದರ್ಶನ ಪಡೆದು ವಿಶೇಷ ಪೂಜೆಗಳಲ್ಲಿ ಪಾಲ್ಗೊಂಡರು. ಇದೇ ಸಂದರ್ಭದಲ್ಲಿ ಪ್ರತಿಭಾವಂತ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ನೆರವು ನೀಡುವ ಯೋಜನೆಗೂ ಚಾಲನೆ ನೀಡಲಾಯಿತು.**

ಧ್ಯಾನ ಮಂದಿರದ ಸಂಸ್ಥಾಪಕ ಧರ್ಮಾಧಿಕಾರಿ ಸಾಯಿ ಕಿರಣ ಆದೋನಿ ಮಾತನಾಡಿ, ಗುರುಪೂರ್ಣಿಮೆಯು ಗುರು ಪರಂಪರೆಯನ್ನು ಸ್ಮರಿಸುವ ಪವಿತ್ರ ಹಬ್ಬವಾಗಿದೆ. ಧಾರ್ಮಿಕ ಆಚರಣೆಗಳ ಜೊತೆಗೆ ಸಮಾಜಮುಖಿ ಸೇವೆಗಳನ್ನು ಕೈಗೊಳ್ಳುವುದು ಸಾಯಿಬಾಬರ ಸಂದೇಶವಾಗಿದೆ ಎಂದು ಹೇಳಿದರು.

ಈ ಬಾರಿ ಮಹೋತ್ಸವದ ಪ್ರಮುಖ ಆಕರ್ಷಣೆಯಾಗಿ



ಶಿರಡಿಯಿಂದ ತರಲಾಗಿರುವ ಶ್ರೀ ಸಾಯಿಬಾಬಾ ಧರಿಸಿದ್ದ ಪವಿತ್ರ ಕಾಫ್ನಿಯ ಸಾರ್ವಜನಿಕ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ಪವಿತ್ರ ವಸ್ತ್ರದ ಸಮ್ಮುಖದಲ್ಲೇ ಸಮಾಜಕ್ಕೆ ಉಪಯುಕ್ತವಾಗುವ ಶಾಶ್ವತ ಸೇವಾ ಕಾರ್ಯ ಆರಂಭಿಸುವ ಸಂಕಲ್ಪದೊಂದಿಗೆ ಶ್ರೀ ಶಿರಡಿ ಸಾಯಿಬಾಬಾ ಸೇವಾ ಚಾರಿಟೇಬಲ್ ಟ್ರಸ್ಟ್, ಅಮೆರಿಕದ ಸಾಫ್ಟ್‌ವೇರ್ ಇಂಜಿನಿಯರ್ ಅಭಿಲಾಷ್ ಚಕ್ಷಾ, ಸಂತೋಷ್ ಪಾಟೀಲ್ ಹಾಗೂ ಧರ್ಮರಾಜ್ ಗೌಡ ಅವರ ಸಹಯೋಗದಲ್ಲಿ ಶೈಕ್ಷಣಿಕ ನೆರವು ಯೋಜನೆ ಆರಂಭಿಸಲಾಗಿದೆ ಎಂದು ತಿಳಿಸಿದರು.

ಕೋವಿಡ್ ಸಂಕಷ್ಟದ ಸಮಯದಲ್ಲಿ 25 ದಿನಗಳ ಕಾಲ ಅನ್ನಸಂತರ್ಪಣೆ ನಡೆಸಿದ ಅನುಭವವನ್ನು ಸ್ಮರಿಸಿದ ಅವರು, ಇದೀಗ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ಮುಂದಾಗಿದ್ದೇವೆ. ಮೊದಲ ಹಂತದಲ್ಲಿ ಪಿಯುಸಿ ದ್ವಿತೀಯ ವರ್ಷದ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಆರ್ಥಿಕವಾಗಿ ದುರ್ಬಲ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಲ್ಯಾಪ್‌ಟಾಪ್, ಕಂಪ್ಯೂಟರ್, ಟ್ಯಾಬ್ಲೆಟ್ ಸೇರಿದಂತೆ ಅಗತ್ಯ ಶೈಕ್ಷಣಿಕ ನೆರವು ನೀಡಲಾಗುವುದು ಎಂದರು.

ಈ ಯೋಜನೆಯಡಿ ಪಿಯುಸಿಯಲ್ಲಿ ಶೇ.90.33 ಅಂಕ ಗಳಿಸಿದ ಲಿಂಗಸುಗೂರು ತಾಲ್ಲೂಕಿನ ನರಸಿಂಹ?ವಿಜಯಲಕ್ಷ್ಮಿ ದಂಪತಿಯ ಪುತ್ರಿ ಪ್ರಜ್ಞಾ ಅವರಿಗೆ ಲ್ಯಾಪ್‌ಟಾಪ್ ವಿತರಿಸಿ ಗೌರವಿಸಲಾಯಿತು.

ವಿದ್ಯಾರ್ಥಿಗಳು ಜೀವನದಲ್ಲಿ ಯಶಸ್ಸು ಸಾಧಿಸಿದ ಬಳಿಕ ತಮಗೆ ದೊರೆತ ನೆರವನ್ನು ಸಮಾಜಕ್ಕೆ ಮರಳಿ ನೀಡುವ ಮನೋಭಾವ ಬೆಳೆಸಿಕೊಳ್ಳಬೇಕು. ಪ್ರತಿಯೊಬ್ಬ ಫಲಾನುಭವಿಯೂ ಮುಂದೆ ಕನಿಷ್ಠ ಮೂವರು ವಿದ್ಯಾರ್ಥಿಗಳಿಗೆ ಸಹಾಯ ಮಾಡುವ ಸಂಕಲ್ಪ ಮಾಡಬೇಕು. ಹೀಗೆ ಸೇವೆಯ ಸರಪಳಿ ಮುಂದುವರಿದರೆ ಸಮಾಜದಲ್ಲಿ ಶಿಕ್ಷಣ ಮತ್ತು ಮಾನವೀಯ ಮೌಲ್ಯಗಳು ಮತ್ತಷ್ಟು ಬಲಗೊಳ್ಳುತ್ತವೆ ಎಂದು ಸಾಯಿ ಕಿರಣ ಆದೋನಿ ಹೇಳಿದರು.

ಇದಕ್ಕೂ ಮುನ್ನ ಬೆಳಿಗ್ಗೆ 6 ಗಂಟೆಯಿಂದ ಶ್ರೀ ಸಾಯಿಬಾಬಾರಿಗೆ ವಿಶೇಷ ಪೂಜೆ, ಅಭಿಷೇಕ, ಪುಷ್ಪಾಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ವಿಧಿವಿಧಾನಗಳು ನೆರವೇರಿದವು. ಮಧ್ಯಾಹ್ನ ಮಹಾ ಸಾಯಿ ಆರತಿ ನಡೆದ ಬಳಿಕ ಸಾವಿರಾರು ಭಕ್ತರಿಗೆ ಮಹಾ ಅನ್ನಸಂತರ್ಪಣೆ ಏರ್ಪಡಿಸಲಾಯಿತು. ಸಂಗೀತೋತ್ಸವ, ಭಜನೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಆಧ್ಯಾತ್ಮಿಕ ಪ್ರವಚನಗಳು ಮಹೋತ್ಸವಕ್ಕೆ ವಿಶೇಷ ಮೆರುಗು ತಂದವು. ಎರಡು ದಿನಗಳ ಕಾಲ ನಡೆಯುವ ಈ ಮಹೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸುತ್ತಿದ್ದಾರೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101